ಛೇರ್ಮನ್:- ಕೃಷ್ಣಾ ಜಲಾನಯನ ಪ್ರದೇಶ ಪ್ರಾಧಿಕಾರ ವಿಧೇಯಕ 1992 ಇದನ್ನು ನಾಳೆಗೆ ತೆಗೆದುಕೊಳ್ಳೋಣ.

ಶಾಸನಾತ್ಮಕ ನಿರ್ಣಯ

ಶ್ರೀ ಎಸ್.ಬಂಗಾರಪ್ಪ:- ಮಾನ್ಯಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಈ ಒಂದು ನಿರ್ಣಯವನ್ನು ಸದನದ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

" This House considers that there is necessity of establishment of the permanent Karnataka High Court Bench in North Karnataka Area and this House urges the Government of India to establish a permanent Court Bench immediately." ಈ ನಿರ್ಣಯವನ್ನು ಮಂಡನೆ ಮಾಡುವುದಕ್ಕಾದರೂ ಕಾರಣ ಒಂದೇ ಒಂದು ಇದೆ. ಈ ಕಡೆ ಮತ್ತು ಆ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರುಗಳು ಪಕ್ಷಾತೀತವಾಗಿ ನಾವು ಒಂದು ಬೇಡಿಕೆಯನ್ನು ಪದೇ ಪದೇ ಇಡುತ್ತಿದ್ದೇವೆ. ಇವತ್ತು ಮಹಾರಾಷ್ಟ್ರದಲ್ಲಿ ಔರಂಗಾಬಾದ್‌ನಲ್ಲಿದೆ, ನಾಗಪುರದಲ್ಲಿದೆ. ಆಮೇಲೆ ಉತ್ತರ ಪ್ರದೇಶದಲ್ಲಿದೆ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಇವೆ. ಮೊನ್ನೆ ಮೊನ್ನೆ ತಾನೇ ಅಸ್ಸಾಂನಲ್ಲಿ ಮಾಡಿದ್ದಾರೆ. ಅಲ್ಲಿಕೂಡ ಇದೇ ರೀತಿಯ ಹೌಸ್ ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು, ಒತ್ತಡವನ್ನು ತಂದು ಮಾಡಿದ್ದಾರೆ. ಇಲ್ಲಿ ನಾವಾದರೂ ಕೂಡ ಇವತ್ತು ಕಕ್ಷಿದಾರರಿಗೆ ಅನುಕೂಲವಾಗಬೇಕು ಅವರು ಬೆಳಗಾಂ, ಬಿಜಾಪುರ, ಧಾರವಾಡ, ಬೀದರ್, ಗುಲ್ಬರ್ಗ, ಕಾರವಾರ, ರಾಯಚೂರು ಈ ಕಡೆಯಿಂದ ಬೆಂಗಳೂರಿಗೆ ಬರತಕ್ಕಂಥ ಅನೇಕ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್‌ನ ಸ್ಥಾಪನೆ ಮಾಡುವುದರಿಂದ ಜನಸಾಮಾನ್ಯರಿಗೆ ಅನೂಕೂಲವಾಗಲಿದೆ. ಇಲ್ಲಿ ಬಂದು ಉಳಿಯುವುದರಿಂದ ಅದರ ಖರ್ಚು ವೆಚ್ಚವೂ ಕೂಡಾ ಜಾಸ್ತಿಯಾಗುತ್ತದೆ. ಇದನ್ನು ತಡೆಹಿಡಿಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಇದನ್ನು ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಇದು ಜನತೆಯ ಆಸೆಯಾಗಿದೆ. ಅದಕ್ಕೋಸ್ಕರ ಈ ಒಂದು ನಿರ್ಣಯದ ಮುಖಾಂತರ ಕೇಂದ್ರ ಸರ್ಕಾರಕ್ಕೆ ನಾವು ಒತ್ತಡವನ್ನು ತರಬೇಕೆನ್ನುತಕ್ಕಂಥ ವಿಚಾರವನ್ನು ನಾವು ಮಾಡಿದ್ದೇವೆ. ಇವತ್ತು ಬೆಳಿಗ್ಗೆ ಮೇಲ್ಮನೆಯಲ್ಲಿ ಈ ನಿರ್ಣಯವನ್ನು ಯಾವುದೇ ಒಂದು ಮರುಮಾತನಾಡದೆ ಚರ್ಚೆಯಿಲ್ಲದೆ ಪಾಸ್ ಮಾಡಿದ್ದಾರೆ. ವಿರೋಧಪಕ್ಷದ ನಾಯಕರು ನಾವು ಚರ್ಚೆ ಮಾಡುವುದಿಲ್ಲ. ನಮ್ಮೆಲ್ಲರ ಬೆಂಬಲ ಇದೆ ಎಂದು ಹೇಳಿದರು. ಎಲ್ಲಾ ಪಕ್ಷಗಳವರೂ ಅದೇ ರೀತಿ ಹೇಳಿದ್ದಾರೆ. ಹೀಗೆ ಆ ಮನೆಯಲ್ಲಿಯೂ ಕೂಡ ನಿರ್ಣಯ ಮಂಡನೆಯಾಗಿ ಸರ್ವಾನುಮತದಿಂದ ಪಾಸಾಗಿದೆ. ಅದೇ ರೀತಿಯಾಗಿ ಅಲ್ಲಿಯೂ ಕೂಡ ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತಿದ್ದೇನೆ, ಇದನ್ನು ಸರ್ವಾನುಮತದಿಂದ ಪಾಸುಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಅದಕ್ಕೆ ತಾವು ಬೆಂಬಲವನ್ನು ಕೊಡಬೇಕೆನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಿದ್ದೇವೆ.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಹೆಚ್.ಬನ್ನಿಕೋಡ್: (ಹಿರೇಕೆರೂರ್):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂಥ ಈ ಒಂದು ನಿರ್ಣಯದ ಬಗ್ಗೆ ಬಹುತೇಕ ಸದನದಲ್ಲಿ ಭಿನ್ನಾಭಿಪ್ರಾಯ ಇಲ್ಲ. ಬಹಳ ದಿನಗಳಿಂದ ಉತ್ತರ ಕರ್ನಾಟಕದಲ್ಲಿ ಶ್ರೇಷ್ಠ ನ್ಯಾಯಾಲಯದ ಪೀಠ ಸ್ಥಾಪನೆಯಾಗಬೇಕೆಂಬ, ಒತ್ತಾಯ ಇತ್ತು. ಈ ದಿವಸ ಸರ್ಕಾರ ಈ ಒಂದು ನಿರ್ಣಯವನ್ನು ಮಂಡಿಸಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್‌ನ ಪೀಠವನ್ನು ಸ್ಥಾಪಿಸುವುದಕ್ಕೆ ತಂದಿರತಕ್ಕಂಥ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆ ಭಾಗದ ಧಾರವಾಡ, ಬಿಜಾಪುರ, ಬೆಳಗಾಂ, ರಾಯಚೂರು, ಗುಲ್ಬರ್ಗ, ಕಾರವಾರ್, ಈ ಜಿಲ್ಲೆಗಳ ಜನರಿಗೆ ಬೆಂಗಳೂರು ಅತೀ ದೂರವಾದುದು. ಕಕ್ಷಿದಾರರಿಗೆ, ಲಿಟಿಗೆಂಟ್ ಪಬ್ಲಿಕ್ ಇಲ್ಲಿ ಬೆಂಗಳೂರಿಗೆ

ಬಂದು ಇಲ್ಲಿ ವಿಪರೀತವಾಗಿ ಹಣವನ್ನು ಖರ್ಚುಮಾಡಿಕೊಂಡು ವಕೀಲರನ್ನು ನೇಮಿಸಿಕೊಂಡು ತಮ್ಮ ಕೇಸುಗಳನ್ನು ನ್ಯಾಯಯುತವಾಗಿ ಗೆಲ್ಲಲಿಕ್ಕೆ ಸಾಧ್ಯವಿಲ್ಲದೆ ಎಷ್ಟೋ ಸಾರಿ ಕೈಬಿಡುವಂಥ ಪ್ರಸಂಗ ಬಡವರಿಗೆ ಬರುತ್ತಿತ್ತು. ಆದ್ದರಿಂದ ಉತ್ತರ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾದರೆ ಬೀದರ್, ಗುಲ್ಬರ್ಗ, ಬೆಳಗಾಂ, ಧಾರವಾಡ್ ಭಾಗದ ಎಲ್ಲರಿಗೂ ಅನುಕೂಲವಾಗುತ್ತದೆ. ಈ ಒಂದು ಪೀಠವನ್ನು ಸ್ಥಾಪಿಸುವುದಕ್ಕೆ ಸಾರ್ವಜನಿಕರಿಂದ, ವಕೀಲರಿಂದ, ಆ ಭಾಗದ ಮುಖಂಡರಿಂದ ಅನೇಕ ದಿವಸಗಳಿಂದ ಒತ್ತಾಯ ಇತ್ತು. ಉತ್ತರ ಕರ್ನಾಟಕದ ನ್ಯಾಯವಾದಿಗಳು ಬೀದಿಗೆ ಇಳಿದು ಹೋರಾಟವನ್ನು ಮಾಡಬೇಕಾಯಿತು., ಸತ್ಯಾಗ್ರಹವನ್ನು ಮಾಡಿದರು, ಉಪವಾಸವನ್ನು ಮಾಡಿದರು. ಏನೇ ಆಗಲಿ, ಈಗಲಾದರೂ ಸರ್ಕಾರ ಅದರ ಮಹತ್ವವನ್ನು ಅರಿತು,ಅದರ ನ್ಯಾಯಯುತವಾದ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿ, ಈ ನಿರ್ಣಯವನ್ನು ಮುಖ್ಯಮಂತ್ರಿಗಳು ತಂದಿದ್ದಾರೆ. ಮಧ್ಯವರ್ತಿ ಸ್ಥಳ ಆದಂಥ ಹುಬ್ಬಳ್ಳಿ-ಧಾರವಾಡಕ್ಕೆ ಸುತ್ತಮುತ್ತಲಿನ ಎಲ್ಲಾ ಜಿಲ್ಲೆಗಳು ಇಲ್ಲಿಗೆ ಸಮೀಪವಾಗುತ್ತಿವೆ. ಬೇರೆ ಕಡೆಯಾದರೆ ದೂರವಾಗುತ್ತದೆ. ಆದರೆ ಸ್ಥಳವನ್ನು ಈ ನಿರ್ಣಯದಲ್ಲಿ ಸೂಚಿಸಿಲ್ಲ. ಆದೇನೆ ಇದ್ದರೂ ಈ ಒಂದು ನಿರ್ಣಯ ಸ್ವಾಗತಾರ್ಹವಾದುದು. ಸೂಕ್ತವಾದಂಥ, ಮಧ್ಯಸ್ಥಳವಾದಂಥ ಹುಬಳ್ಳಿ ಧಾರವಾಡದಲ್ಲಿ ಇದನ್ನು ಮಾಡಿ ರಾಜ್ಯ ಸರ್ಕಾರ ಆದಷ್ಟು ಬೇಗ ಕೇಂದ್ರ ಸರ್ಕಾರದವರ ಮೇಲೆ ಒತ್ತಡವನ್ನು ತಂದು ಒಮ್ಮತದ ಈ ನಿರ್ಣಯವನ್ನು ಆದಷ್ಟು ಕೂಡ ಕಾರ್ಯರೂಪಕ್ಕೆ ತರಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಎಂ.ಹಿಂಡಸಗೇರಿ :(ಹುಬ್ಬಳ್ಳಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ತೆರೆಯಲಿಕ್ಕೆ ಸೂಚನೆಯನ್ನು ಏನು ಮಂಡಿಸಿದ್ದಾರೆ ನಾನು ಅದಕ್ಕೆ ಹೃತ್ಪೂರ್ವಕವಾಗಿ ಅಭಿನಂದನೆಯನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಸಲ್ಲಿಸುತ್ತೇನೆ. ಮತ್ತು ಈ ನಿರ್ಣಯವನ್ನು ಬೆಂಬಲಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ, ಉತ್ತರಭಾಗದಲ್ಲಿ ಬಹಳ ದಿವಸಗಳಿಂದ ನ್ಯಾಯಾಧೀಶರು, ವಕೀಲರು, ವ್ಯವಸ್ಥಾಪಕರು ಹಾಗೂ ಎಲ್ಲಾ ಜನರು ಇದಕ್ಕೆ ಒತ್ತಾಯವನ್ನು ಮಾಡುತ್ತಿದ್ದರು, ಇವತ್ತಿನ ದಿವಸ ಸುದ್ಧೆವದಿಂದ ಮಾನ್ಯ ಮುಖ್ಯಮಂತ್ರಿಗಳು ಈ ನಿರ್ಣಯವನ್ನು ತಂದಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಬೆಂಬಲಿಸುತ್ತೇನೆ. ಆದಷ್ಟು ತೀವ್ರವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಹುಬ್ಬಳ್ಳಿ, ಧಾರವಾಡ ಮಹಾನಗರದ ಕಾರ್ಪೊರೇಷನ್ ಏರಿಯಾದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕು. ಏಕೆಂದರೆ, ನಮ್ಮ ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟು ನಂತರ ಎರಡನೆಯ ಸ್ಥಾನ ಹುಬ್ಬಳ್ಳಿಗೆ ಇದೆ. ಅದಕ್ಕೋಸ್ಕರ ಅಲ್ಲಿ ಮಾಡುವುದರಿಂದ ಎಲ್ಲರಿಗೂ ಅನುಕೂಲವಾಗುವ ದೃಷ್ಟಿಯಿಂದ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಆದಷ್ಟು ತೀವ್ರವಾಗಿ ಅಲ್ಲಿ ಈ ಪೀಠವನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ಈ ಸೂಚನೆಗೆ ನಾನು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಮೇಲ್ಮನೆಯಲ್ಲಿ ಯಾರು ಸದಸ್ಯರು ಚಾಸ್ತಿ ವಿಚಾರಮಾಡದೆ ಬೆಂಬಲಿಸಿದ್ದಾರೆ. ತಾವೆಲ್ಲರೂ ಇದಕ್ಕೆ ಬೆಂಬಲವನ್ನು ಕೊಡಬೇಕೆಂದು ನಾನು ತಮಗೆ ವಿನಂತಿ ಮಾಡಿಕೊಂಡು, ಈ ಸಂದರ್ಭದಲ್ಲಿ ತಾವು ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಡಾ.ಎ.ಬಿ.ಮಲಕರೆಡ್ಡಿ : (ಯಾದ್ಗೀರ್):- ಮಾನ್ಯ ಉಪಾಧ್ಯಕ್ಷಿಣಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿರುವ ಈ ನಿರ್ಣಯಕ್ಕೆ ನಾನು ಸಹ ಸ್ವಾಗತವನ್ನು ಬಯಸುತ್ತಾ, ಅದರ ವ್ಯಾಪ್ತಿಯ ಬಗ್ಗೆ ಒಂದೆರಡು ಮಾತನಾಡಲು ನಾನು ಇಚ್ಛೆಪಡುತ್ತೇನೆ. ಈಗ ಉತ್ತರ ಕರ್ನಾಟಕ ಅಂದರೆ, ಆ ಭಾಗದಿಂದ ಬಂದಿರುವ ಅನೇಕ ಸದಸ್ಯರ ಅಭಿಪ್ರಾಯ ಏನೆಂದರೆ, ಧಾರವಾಡ ಅಥವಾ ಹುಬ್ಬಳ್ಳಿ ಹೆಡ್‌ಕ್ವಾರ್ಟರ್ಸ್ ಆಗಬೇಕೆನ್ನುವ ಅಭಿಪ್ರಾಯ ಇದೆ. ಆದರೆ ಉತ್ತರ ಕರ್ನಾಟಕದ ಉಳಿದರ್ಧ ಭಾಗಗಳಾದ ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಅಲ್ಲಿಯ ಜನರ ಅಭಿಮತ ಏನಿದೆ ಅಂದರೆ, ಈಗ ಬೆಂಗಳೂರಿನಲ್ಲಿ ನ್ಯಾಯಪೀಠ ಇದ್ದರೂ ಅಷ್ಟೆ,

ಧಾರವಾಡದಲ್ಲಿದ್ದರೂ ಅಷ್ಟೆ, ಅಂತರ ಅಷ್ಟೇ, ಆಗುತ್ತದೆ. ಬೀದರ್‌ನವರು ಇಲ್ಲಿಗೆ ಬರಬೇಕಾದರೂ ಅಂತರ ಅಷ್ಟೇ ಆಗುತ್ತದೆ. ಮತ್ತೆ ಬೀದರ್‌ನವರು ಧಾರವಾಡಕ್ಕೆ ಹೋಗಬೇಕಾದರೂ ಅಷ್ಟೇ ಅಂತರವಾಗುತ್ತದೆ. ಆದರೆ ಅಲ್ಲಿ ಪ್ರತ್ಯೇಕ ಒಂದು ನ್ಯಾಯಪೀಠ ಸ್ಥಾನ ಇದೆ. ಎನ್ನುವ ಕಾರಣದಿಂದ ಅದೊಂದು ಕೆಲಸಕ್ಕೆ ಅಲ್ಲಿಗೆ ಹೋಗುವುದಕ್ಕೆ ಜನರಿಗೆ ಬಹಳ ಅನಾನುಕೂಲತೆಯಾಗುತ್ತದೆ. ಆದಕ್ಕಾಗಿ ಆದರ ವ್ಯಾಪ್ತಿಯನ್ನು ಅಂದರೆ ಜ್ಯೂರಿಸ್‌ಡಿಕ್ಷನ್ ಫಿಕ್ಸ್ ಮಾಡುವ ಕಾಲಕ್ಕೆ ದಯಮಾಡಿ ಗುಲ್ಬರ್ಗ ಡಿವಿಜನ್ ಜನರ, ಅಲ್ಲಿನ ವಕೀಲರ, ಅಲ್ಲಿನ ನ್ಯಾಯಾಧೀಶರ ಅಥವಾ ಸಾರ್ವಜನಿಕ ಕಾರ್ಯಕರ್ತರ ಅಭಿಪ್ರಾಯವನ್ನು ಕೇಳಿ ಆದರ ವ್ಯಾಪ್ತಿಯನ್ನು ನಿರ್ಣಯಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ತಮ್ಮ ಮುಖಾಂತರ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: (ಚಾಮರಾಜನಗರ):- ಮಾನ್ಯ ಉಪಾಧ್ಯಕ್ಷರಿಣಿಯವರೆ, ಉಚ್ಚನ್ಯಾಯಾಲಯದ ಖಾಯಂ ಪೀಠದ ಸ್ಥಾಪನೆಯ ಬಗ್ಗೆ ಬಹಳ ವರ್ಷಗಳಿಂದ ಒತ್ತಾಯ ಬಂದಿದೆ. ಕೆಲವರು ಬೆಳಗಾವಿಯಲ್ಲಿ ಮಾಡಬೇಕೆಂದು ಹೇಳುತ್ತಾರೆ. ಮತ್ತೆ ಕೆಲವರು ಹುಬ್ಬಳ್ಳಿ ಧಾರವಾಡದಲ್ಲಿ, ಕೆಲವರು ಗುಲ್ಬರ್ಗ ಬೀದರ್ ಈ ತರಹ ಅವರವರ ಪ್ರದೇಶದಲ್ಲಿ ಮಾಡಬೇಕೆನ್ನುವ ಒತ್ತಾಯ ಇದೆ. ಬಿಜಾಪುರದವರು ಸಹ ಹೇಳಿದ್ದಾರೆ. ನನಗೆ ಅನ್ನಿಸುತ್ತದೆ, ಇದು ಸಂತೋಷದ ವಿಷಯ. ಒಂದು ನ್ಯಾಯಪೀಠ ಬೆಂಗಳೂರು ನಗರದಲ್ಲಿದೆ. ಬೆಂಗಳೂರು ನಗರ ಬಹಳ ದೂರ ಎನ್ನತಕ್ಕ ದೃಷ್ಟಿ ಬಿಟ್ಟರೆ ನಾವು ಇದನ್ನು ಎರಡು ಕರ್ನಾಟಕವನ್ನಾಗಿ, ಎರಡು ಭಾಗವಾಗಿ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ಒಂದೇ, ಇದು ಸಮಗ್ರ ಕರ್ನಾಟಕ, ಇದರಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಹೈದರಾಬಾದ್ ಕರ್ನಾಟಕ ಎನ್ನತಕ್ಕ ಭಾವನೆ ಅದಲಾವಣೆ ಆಗದೆ ನಮ್ಮಲ್ಲಿ ಹೃದಯಪರಿವರ್ತನೆಯಾಗಬೇಕು. ನಾವೆಲ್ಲ ಒಂದಾಗಿದ್ದೇವೆ. ಈ ನಾಡಿನ ಜನರೆಲ್ಲ ಒಂದೆ. 1956 ರಲ್ಲಿ ಕರ್ನಾಟಕ ಏಕೀಕರಣವಾಯಿತು. ಅಲ್ಲಿಂದ ಇಲ್ಲಿಯವರೆಗೆ ನಾವೆಲ್ಲ ಒಂದಾಗಿದ್ದೇವೆ. ಎನ್ನತಕ್ಕ ಭಾವನೆ ನಮ್ಮಲ್ಲಿ ಬೆಳೆಯಬೇಕು. ಆ ಭಾವನೆಯು ಬೆಳೆಯಬೇಕಾದರೆ ಆ ಜನರ ನೋವು ನಲಿವುಗಳನ್ನು ಯಾವುದೇ ಸರ್ಕಾರ ಬಂದಾಗ ಅರ್ಥಮಾಡಿಕೊಳ್ಳಬೇಕು. ಚಿಂತನೆ ಮಾಡಿಕೊಳ್ಳಬೇಕು, ಅವರಿಗೆ ಆಗತಕ್ಕ ಸವಲತ್ತುಗಳನ್ನು ಒದಗಿಸಬೇಕು. ಇದು ಭಾವನಾತ್ಮಕವಾಗಿ ಕರ್ನಾಟಕ ಏಕೀಕರಣವಾಗಿರಬಹುದು. ಸಾಮಾಜಿಕವಾಗಿ, ಆರ್ಥಿಕವಾಗಿ ಎಲ್ಲಾ ರೀತಿಯಿಂದಲೂ ಈ ಸಮೃದ್ಧ ಕರ್ನಾಟಕ ಬೆಳೆಯಬೇಕಾಗಿದೆ. ಆದರಲ್ಲಿ ಮೈಸೂರು ಕಡೆಯಾಗಲಿ, ಹುಬ್ಬಳ್ಳಿಯ ಕಡೆಯಾಗಲಿ, ಬೆಳಗಾಂ ಕಡೆಯಾಗಲಿ ತಾರತಮ್ಯವನ್ನು ತೋರದೆ ಇಡೀ 4 ಕೋಟಿ ಕನ್ನಡಿಗರು ಒಂದಾಗಿದ್ದೇವೆ. ಎನ್ನತಕ್ಕ ಬಾವನೆಯಿಂದ ನಾವು ಮಾಡಬೇಕಾಗಿದೆ. ಇವತ್ತು ಅನೇಕ ಮುಂಡಲಿಗಳು ಇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ, ಮಲೆನಾಡು ಅಭಿವೃದ್ಧಿ ಮಂಡಲಿ ಇದೆ. ಇದರ ಉದ್ದೇಶವೇನೆಂದರೆ, ಎಲ್ಲೆಲ್ಲಿ ಸ್ವಲ್ಪ ಹಿಂದುಳಿದಿದೆ, ಅದರ ಬೆಳವಣಿಗೆಯಾಗದೆ ಇರತಕ್ಕ ಅದರ ಹಿಂದೆ ಇರತಕ್ಕ ಸದುದ್ದೇಶವೇ ಹೊರತು ಇದು ಕರ್ನಾಟಕದ ಒಂದು ಗುಂಪನ್ನು ಒಂದೊಂದು ಕಡೆ ಮಾಡತಕ್ಕ ಉದ್ದೇಶವೇನಲ್ಲ. ಬೆಂಗಳೂರು ಮಹಾನಗರ ನಿಜವಾಗಿಯೂ ಕರ್ನಾಟಕದ ರಾಜಧಾನಿಯಾಗುವುದಕ್ಕೆ ಎಲ್ಲಾರೀತಿಯ ಶಕ್ತಿಯನ್ನು , ಸಾಮರ್ಥ್ಯವನ್ನು, ಚೈತನ್ಯವನ್ನು ಪಡೆದಿರತಕ್ಕ ಮಹಾನಗರವಾಗಿದೆ. ಇದಕ್ಕೆ ಭೂಷಣವಾಗಿ ಈ ಶಾಸನಸಭೆ, ಈ ವಿಧಾನಸೌಧ ಇದೆ. ಈ ವಿಧಾನಸೌಧಕ್ಕೆ ಶ್ರೀ ಕೆಂಗಲ್ ಹನುಮಂತಯ್ಯನವರು ಏನು ಕಟ್ಟಿಸಿದರು, ಇದು ನಿಜವಾಗಿಯೂ ರಾಜಧಾನಿಗೆ ಒಂದು ಭೂಷಣವಾಯಿತು. ಇವೊತ್ತು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ನಿಜವಾಗಿಯೂ ಇವರು ಜನರ ಮನಸ್ಸನ್ನು ಸ್ಪಂದಿಸಿದ್ದಾರೆ. ಯಾವ ಒಂದು ಭಾಗದ ಕನ್ನಡ ಜನರು ಅಂದರೆ ನಾನು ಇದನ್ನು ಉತ್ತರ ಕರ್ನಾಟಕ ಅಥವಾ ದಕ್ಷಿಣ ಕರ್ನಾಟಕವೆಂದು ಕರೆಯುವುದಕ್ಕೆ ತಯಾರಾಗಿಲ್ಲ. ಈ ನಿರ್ಣಯದಲ್ಲಿ ಉತ್ತರ ಕರ್ನಾಟಕ ಪ್ರದೇಶ ಎನ್ನತಕ್ಕಂಥ ಮಾತು ಬಂದಿದೆ. ನಿರ್ಣಯವನ್ನು ಯಾವುದೇ ರೀತಿಯಲ್ಲಿ ತಂದರೂ ಕೂಡ ಯಾವ ಒಂದು ಗಡಿ ಭಾಗದ ಕನ್ನಡ ಜನರು, ರಾಜಧಾನಿಯಿಂದ ಸ್ವಲ್ಪ ದೂರ ಇದ್ದಾರೋ, ಆ ಜನ ಮನಕ್ಕೆ ಅನುಕೂಲವಾಗಲಿ ಎನ್ನತಕ್ಕಂಥ ಉದ್ದೇಶ.

ಈ ಬಗ್ಗೆ ಬಹಳ ಕಾಲದಿಂದಲೂ ಬೇಡಿಕೆ ಇದೆ. ನಮಗೆ ಒಂದು ನ್ಯಾಯ ಪೀಠ ಬೇಕು ಎನ್ನತಕ್ಕಂಥಾದ್ದು ಬಹು ಕಾಲದ ಬೇಡಿಕೆ. ಈ ಬೇಡಿಕೆಗೆ ಸರ್ಕಾರ ಸ್ಪಂದಿಸಿದೆ. ಇದಕ್ಕಾಗಿ ನಾನು ಸರ್ಕಾರವನ್ನು ಮುಕ್ತ ಕಂಠದಿಂದ ಅಭಿನಂದಿಸುತ್ತೇನೆ. ಇದು ಬೇಕಾಗಿದೆ. ಇದರಲ್ಲಿ ಒಂದು ಪ್ರಶ್ನೆ ಇದೆ. ಏನೆಂದರೆ, ಕೆಲವರು ಹುಬ್ಬಳ್ಳಿ, ಧಾರವಾಡ ಆಗಬೇಕೆಂದು ಹೇಳುತ್ತಾರೆ, ಇನ್ನು ಕೆಲವರು ಗುಲ್ಬರ್ಗದಲ್ಲಿ ಆಗಬೇಕೆಂದು ಹೇಳುತ್ತಾರೆ. ಆದ್ದರಿಂದ ನಾನು ಎಲ್ಲರಿಗೂ ಸಮನ್ವಯವಾಗುವಂಥ ಸಲಹೆಯನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಿಗೆ ಕೊಡುತ್ತಿದ್ದೇನೆ. ಬಿಜಾಪುರದವರು ಒಂದು ಕಡೆ ಕೇಳುತ್ತಿದ್ದಾರೆ, ಗುಲ್ಬರ್ಗದವರು ಒಂದು ಕಡೆ ಕೇಳುತ್ತಿದ್ದಾರೆ, ಹುಬ್ಬಳ್ಳಿ ಧಾರವಾಡದವರು ಒಂದು ಕಡೆ ಕೇಳುತ್ತಿದ್ದಾರೆ. ಎಲ್ಲರಿಗೂ ಸಮಾನವಾಗಿ ಕೊಡಬೇಕಾಗಿದೆ. ಬೆಳಗಾವಿ ಅಚ್ಚ ಕನ್ನಡ ಪ್ರದೇಶ ಮತ್ತು ಗಡಿ ಪ್ರದೇಶವೆನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಅದು ರಾಜ್ಯದ ಅಂಚಿನಲ್ಲಿರತಕ್ಕಂಥಾದ್ದು. ಆದುದರಿಂದ, ಎಲ್ಲರಿಗೂ ರಾಜಿ ಮಾಡತಕ್ಕಂಥಾದ್ದು, ಸಮನ್ವಯ ತರತಕ್ಕಂಥಾದ್ದು, ಮತ್ತು ಕರ್ನಾಟಕದ ಗಡಿ ಭಾಗವನ್ನು ಮಹಾಜನ್ ವರದಿ ಪ್ರಕಾರ ಉಳಿಸಿಕೊಳ್ಳತಕ್ಕಂಥ ಶಕ್ತಿ ಬರುತ್ತದೆ. ಮತ್ತು ಬೆಳಗಾವಿಯ ಗಡಿ ಜನರಿಗೆ ನಮಗೆ ಒಂದು ಉಚ್ಚ ನ್ಯಾಯಾಲಯದ ಪೀಠವನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಸಂತೋಷ ಕೂಡ ಉಂಟಾಗುತ್ತದೆ. ಈಗ ಬೆಳಗಾವಿ, ಹುಬ್ಬಳ್ಳಿಗೆ ಹತ್ತಿರವಾಗಿದೆ. ಬೇರೆ ಬೇರೆ ನಮ್ಮ ಸ್ನೇಹಿತರೆಲ್ಲರೂ ಸೇರಿದಾಗ ಹೇಳಿದ್ದಾರೆ. ಬೆಳಗಾವಿ ಎಲ್ಲರಿಗೂ ಕೇಂದ್ರೀಕೃತವಾಗುತ್ತದೆ. ಅಲ್ಲದೆ, ಸಮಗ್ರ ನಾಡಿನ ಎಲ್ಲಾ ಕನ್ನಡಿಗರು ತಮಗೆ ಅಭಿನಂದನೆ ಸಲ್ಲಿಸುತ್ತಾರೆ. ಇದನ್ನು ಎಲ್ಲಾ ವರ್ಗದವರು ಒಪ್ಪುತ್ತಾರೆ. ಗುಲ್ಬರ್ಗದವರು ಕೂಡ ಒಪ್ಪುತ್ತಾರೆ, ಬೇರೆ ಎಲ್ಲರೂ ಒಪ್ಪುತ್ತಾರೆ.

ಶ್ರೀ ಎಲ್.ಆರ್.ಶಿವರಾಮೇಗೌಡ:- ಈಗಾಗಲೇ ಗಡಿ ವಿವಾದದಲ್ಲಿ ಮಹಾರಾಷ್ಟ್ರದ ಜೊತೆ ಹೋರಾಟ ಮಾಡುತ್ತಿರುವಾಗ, ಇದನ್ನು ತೆಗೆದುಕೊಂಡು ದೊಡ್ಡ ಹೋರಾಟ ಮಾಡುವುದು ಎನ್ನುತ್ತೀರಾ ?

ಶ್ರೀ ವಾಟಾಳ್ ನಾಗರಾಜ್:- ನಾನು ನಾಗಮಂಗಲ ವಿಚಾರಕ್ಕೆ ಬಂದರೆ ಅವರು ಮಾತನಾಡಲಿ. ನಾನು ಬೆಳಗಾವಿ ವಿಚಾರವನ್ನು ಮಾತನಾಡುತ್ತಿದ್ದೇನೆ. ಅವರು ಎಲ್ಲಿಯೋ ದಾರಿ ತಪ್ಪುತ್ತಿದ್ದಾರೆ. ಹೈಕೋರ್ಟ್‌ನ ನ್ಯಾಯಪೀಠವನ್ನು ಸ್ಥಾಪಿಸುವುದಕ್ಕೆ ಸರ್ಕಾರ ಏನು ಒಂದು ದಿಟ್ಟ ನಿಲುವನ್ನು ತೆಗೆದುಕೊಂಡಿದೆ, ನಾನು ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ, ಅಭಿನಂದಿಸುತ್ತೇನೆ. ಇದರ ಬಗ್ಗೆ ಆದಷ್ಟು ಬೇಗ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಾವೇ ಸ್ವತಃ ವ್ಯವಹಾರ ನಡೆಸಿ, ಇದನ್ನು ಅತಿ ಶೀಘ್ರವಾಗಿ ತರಬೇಕೆಂದು ಹೇಳಿ, ತಮ್ಮ ಮುಖಾಂತರ ಅವರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನಾರಾಯಣರಾವ್ ಮನಹಳ್ಳಿ: (ಬೀದರ್):- ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಮುಖ್ಯಮಂತ್ರಿಯವರು ತಂದಿರತಕ್ಕ ನಿರ್ಣಯವನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ವಿಷಯವನ್ನು ಹೇಳಬೇಕಾದರೆ, ನ್ಯಾಯ ಪೀಠ ಉತ್ತರ ಕರ್ನಾಟಕದಲ್ಲಿ ಸ್ಥಾಪನೆಯಾಗಬೇಕು. ಎನ್ನತಕ್ಕಂಥ ಬೇಡಿಕೆಯು ಬಹಳ ಕಾಲದಿಂದಲೂ ಇತ್ತು. ಆದರೆ ಈಗಾಗಲೆ ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಮಲಕರೆಡ್ಡಿಯವರು ಹೇಳಿದಂತೆ ಆ ನ್ಯಾಯಪೀಠ ಎಲ್ಲಿ ಆಗಬೇಕು ಎನ್ನತಕ್ಕ ಮಾತು ಇದೆ. ಬೀದರ್, ರಾಯಚೂರು, ಗುಲ್ಬರ್ಗ ಭಾಗದ ಜನರಿಗೆ ಬೆಂಗಳೂರಿಗೆ ಬರುವುದು ಅಥವಾ ಬೆಳಗಾಂ ಧಾರವಾಡಕ್ಕೆ ಹೋಗುವುದು ಎರಡೂ ಅಷ್ಟೇ ದೂರವಾಗುತ್ತದೆ. ಆದರ ಸಲುವಾಗಿ ಈ ನ್ಯಾಯ ಪೀಠ ಸ್ಥಾಪನೆಯಾಗುವಾಗ ಆ ಭಾಗದ ಜನರ ಒಂದು ಅನಿಸಿಕೆ ಏನು ಇದೆ ಅಥವಾ ಅವರ ಒಪೀನಿಯನ್ ಏನು ಇದೆ ಅದನ್ನು ವಿಚಾರದಲ್ಲಿಟ್ಟುಕೊಂಡು ಈ ನ್ಯಾಯ ಪೀಠವನ್ನು ಸ್ಥಾಪನೆ ಮಾಡುವುದರಲ್ಲಿ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ತೀವ್ರವಾಗಿ ಕೆಲಸ ಆಗಬೇಕು. ಏಕೆಂದರೆ ಬಹುಶಃ ಬೆಳಗಾಂನಲ್ಲಿ ಆಗಬೇಕು, ಧಾರವಾಡದಲ್ಲಿ ಆಗಬೇಕು, ಬೀದರ್ ಗುಲ್ಬರ್ಗಾ ದಲ್ಲಿ ಆಗಬೇಕು ಎನ್ನತಕ್ಕಂಥ ಕಚ್ಚಾಟದಲ್ಲಿ ಏನು ಒಂದು ದಿಟ್ಟ ನಿಲುವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಆ ದಿಟ್ಟ ನಿಲುವನ್ನು ತೆಗೆದುಕೊಳ್ಳಲಾರದೆ ಬಹುಶಃ ಆ ಕೆಲಸ ದೀರ್ಘವಾಗಿ ಹೋದರೆ ಅದು ಪೆಂಡಿಂಗ್‌ನಲ್ಲಿ

ಉಳಿಯುತ್ತದೆ. ಬೇರೆ ಬೇರೆ ಕೆಲಸಗಳು ಈಗ ಹೇಗೆ ಉಳಿದಿದೆಯೊ ಆ ರೀತಿ ಇದು ಆಗಬಾರದು. ಈ ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳು ತಂದಿದ್ದಾರೆಂದಮೇಲೆ ಬಹುಶಃ ಇದು ತೀವ್ರಗತಿಯಲ್ಲಿ ಆಗುತ್ತದೆಂದು ನನ್ನ ಅನಿಸಿಕೆ. ಈ ನಿರ್ಣಯವನ್ನು ನಾನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರಿ ಡಿ.ಬಿ.ಚಂದ್ರೇಗೌಡ: (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಉಪಾಧ್ಯಕ್ಷರಿಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕ ಈ ಶಾಸನಾತ್ಮಕ ನಿರ್ಣಯಕ್ಕೆ ನಾನು ಸ್ವಾಗತ ಮತ್ತು ಬೆಂಬಲವನ್ನು ವ್ಯಕ್ತ ಮಾಡುತ್ತಾ ಒಂದು ಸಣ್ಣ ತಿದ್ದುಪಡಿಯನ್ನು ಅವರ ಗಮನಕ್ಕೆ ತರಬೇಕೆಂದು ಇದ್ದೇನೆ. ತಿದ್ದುಪಡಿ ಬಹಳ ದೊಡ್ಡದೇನಲ್ಲ. ಅದರಿಂದ ಅವರು ಗಾಬರಿಪಡುವಂತಿಲ್ಲ. ಉತ್ತರ ಕರ್ನಾಟಕದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯವೆಂದು ಇದೆ. ನಾನು ಅದನ್ನು ಕರ್ನಾಟಕದ ಉತ್ತರ ಭಾಗದಲ್ಲಿ ಎಂದು ಆಗಬೇಕೆಂದು ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಉತ್ತರ ಕರ್ನಾಟಕ, ಬೊಂಬಾಯಿ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎನ್ನುವ ಬದಲು ಕರ್ನಾಟಕದ ಉತ್ತರ ಭಾಗದಲ್ಲಿ, ಕರ್ನಾಟಕದ ವೈಶಾಲ್ಯತೆಯು ವ್ಯಾಪ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಜನಸಂಖ್ಯೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಉತ್ತರ ಕರ್ನಾಟಕ ಎನ್ನುವ ಬದಲು ಕರ್ನಾಟಕದ ಉತ್ತರ ಭಾಗದಲ್ಲಿ ಎಂದು ತಿದ್ದುಪಡಿಯನ್ನು ಮಾಡತಕ್ಕ ಆಲೋಚನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಹೇಳುತ್ತೇನೆ. ನಾವು ಕರ್ನಾಟಕವನ್ನು ದಕ್ಷಿಣ, ಪೂರ್ವ, ಪಶ್ಚಿಮ ಎಂದು ಹೇಳುವ ಬದಲು ಕರ್ನಾಟಕದ ವೈಶಾಲ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕರ್ನಾಟಕದ ಉತ್ತರ ಭಾಗದಲ್ಲಿ ಎಂದು ಮಾಡುವುದು ಒಳ್ಳೆಯದು.

ಶ್ರಿ ಕೆ.ಹೆಚ್.ರಂಗನಾಥ್:- ಕರ್ನಾಟಕ ಉತ್ತರ ಭಾಗವೆಂದರೆ ಬೀದರ್ ಆಗುತ್ತದೆ.

+ಶ್ರಿ ಡಿ.ಬಿ. ಚಂದ್ರೇಗೌಡ:- ಅದೇ ಆಗಬಹುದು. ನನ್ನ ಅಭ್ಯಂತರವಿಲ್ಲ. ಇದರ ಬಗ್ಗೆ ಆಲೋಚನೆ ಮಾಡಿ. ಮತ್ತೊಂದು ವಿಷಯವೇನೆಂದರೆ, ಸರ್ವೋಚ್ಚ ನ್ಯಾಯಾಲಯದ ಒಂದು ಪೀಠ ದಕ್ಷಿಣದಲ್ಲಿ ಆಗಬೇಕು ಎನ್ನತಕ್ಕದ್ದು ಸ್ವಾತಂತ್ರ್ಯ ನಂತರದ ಪ್ರತಿ ವರ್ಷದ ಬೇಡಿಕೆಯಾಗಿದೆ. ಈ ಬೇಡಿಕೆಯು ಅನೇಕ ಸಾರಿ ಸಂಸತ್ತಿನಲ್ಲಿಯೂ ಚರ್ಚೆಗೆ ಬಂದಿದೆ, ಶಾಸಕಾಂಗದಲ್ಲಿಯೂ ಚರ್ಚೆಗೆ ಬಂದಿದೆ. ಒಂದುಸಾರಿ ಸರ್ವೋಚ್ಚ ನ್ಯಾಯಾಲಯದ ಪೀಠ ಕರ್ನಾಟಕಕ್ಕೆ ಬಂದೇ ಬಿಡುತ್ತದೇನೋ ಎಂದು ಯೋಚನೆ ಮಾಡಿ ಬಾಲಬ್ರೂಯಿ ಕಟ್ಟಡವನ್ನು ಕೂಡ ನೋಡಿದ್ದು ಉಂಟು. ಇದಕ್ಕಿಂತಲೂ ಮೊದಲು ಹೈದರಾಬಾದ್‌ನಲ್ಲಿ ಇದನ್ನು ಮಾಡುವುದು ಶ್ರೇಷ್ಠವೆಂದು ಒಂದು ಟೀಮ್ ಆ ಭಾಗಕ್ಕೆ ಬಂದಿರತಕ್ಕದ್ದು ಉಂಟು. ಆದುದರಿಂದ ಈ ಶಾಸನಾತ್ಮಕ ನಿರ್ಣಯವೇನಿದೆ ಇದು ಕರ್ನಾಟಕಕ್ಕೆ ಸೀಮಿತವಾಗಿದ್ದರೂ ಕೂಡ ಸರ್ಕಾರ ಈ ಬಗ್ಗೆ ಕೂಡ ಆಲೋಚನೆ ಮಾಡಬೇಕೆಂದು ನಾನು ಅವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಈ ನ್ಯಾಯ ಪೀಠವನ್ನು ಸ್ಥಾಪನೆ ಮಾಡುವುದು ನಮ್ಮ ಉದ್ದೇಶ. ಸುಮಾರು ನಾಲ್ಕುವರೆ ಕೋಟಿ ಜನಸಂಖ್ಯೆ ಇರತಕ್ಕ ಈ ರಾಜ್ಯದ ನ್ಯಾಯಾಲಯಗಳ ಕಟ್ಟಡಗಳು ಏನು ಬಾಕಿ ಉಳಿದಿದೆ ಆ ಬಾಕಿ ಉಳಿದಿರತಕ್ಕ ಕಟ್ಟಡಗಳ ಮಾಹಿತಿಯನ್ನು ಕೊಡುವುದಕ್ಕೆ ಉಚ್ಚನ್ಯಾಯಾಲಯ ಇಚ್ಛೆಪಡುವುದಿಲ್ಲ. ಆದುದರಿಂದ ಪೀಠವನ್ನು ಮಾಡುವುದಕ್ಕೆ ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ತಿಳಿದಿರುವ ಹಾಗೆ, ಕಳೆದ 5-6 ವರ್ಷಗಳಿಂದ ಈ ಪೀಠ ಸ್ಥಾಪನೆಗೆ ಯಾರಾದರೂ ಅಭ್ಯಂತರವಿದೆಯೆಂದರೆ ಅದು ಉಚ್ಚ ನ್ಯಾಯಾಲಯದ್ದು. ಆದ್ದರಿಂದ ಮೊದಲು ನಾವು ಇಲ್ಲಿ ಒಂದು ರಾಜಕೀಯ ಕಾರಣಕ್ಕಾಗಿ ಠರಾವು ಮಾಡುತ್ತಿದ್ದೇವೆ. ಎನ್ನುವ ಅಭಿಪ್ರಾಯ ಬರದೇ ಇರುವ ಹಾಗೆ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಜೊತೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಸಮಾಲೋಚನೆ ಮಾಡಬೇಕು. ತಾವು ಸಭಾನಾಯಕರಾಗಿ ಅವರ ಜೊತೆ ಚರ್ಚೆ ಮಾಡಬೇಕು. ದುರ್ದೈವದ ಸಂಗತಿಯೆಂದರೆ ಇವತ್ತು ಬೆಳಗಿನ ಒಂದು ಪ್ರಶ್ನೆಯಲ್ಲಿ ಉಚ್ಚ ನ್ಯಾಯಾಲಯ ಈ ಸದನಕ್ಕೆ ಮಾಹಿತಿ ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವಂಥಾದ್ದು ದುರಾದೃಷ್ಟವಶಾತ್ ಚರ್ಚೆಗೆ ಬಂತು. ಅದು ಚರ್ಚೆಗೆ ಬಂದಿದ್ದು ನಿಮ್ಮ ಮಾನ್ಯಮಂತ್ರಿಗಳು ಮಾಡಿದ

ಅಪರಾಧದಿಂದ ಎಂದು ಹೇಳಿದರೆ ನೀವು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ಭಾವನೆಮಾಡುತ್ತೇನೆ. ಅಂದರೆ ಅವರು ಉತ್ತರ ಏನಾದರೂ ಕಳುಹಿಸಲಿ, ಮಂತ್ರಿಗಳು ಅದಕ್ಕೆ ಸಹಿಮಾಡಿ ಶಾಸನಸಭೆ ಮುಂದೆ ಇಟ್ಟುಬಿಟ್ಟರೆ ಅದು ಚರ್ಚೆಯ ವಸ್ತು ಆಗುತ್ತದೆ. ಆದ್ದರಿಂದ ಈಗ ಅವರ ಭಾವನೆಗಳು ನಮಗೆ ಅರ್ಥವಾಗಿದೆ. ಇಲ್ಲಿಗೆ ಮಾಹಿತಿಯನ್ನೇ ಒದಗಿಸುವುದಕ್ಕೆ ತಯಾರು ಆಗಿಲ್ಲದೆ ಇರತಕ್ಕಂತಹ ಒಂದು ಉಚ್ಚ ನ್ಯಾಯಾಲಯ, ಉತ್ತರ ಭಾಗದಲ್ಲಿ ಒಂದು ಪೀಠ ಮಾಡಲಿಕ್ಕೆ ಒಪ್ಪುತ್ತದೆಯೇ ? ಹಾಗೆ ಒಪ್ಪದೇ ಇರುವುದಕ್ಕೆ ಕಾರಣಗಳೇನು ಎಂದು ನನಗೆ ಗೊತ್ತಿಲ್ಲ. ನಾನು ಅದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದಿರುವ ಕಾರಣಗಳು ಬೇರೆ ಇವೆ. ನಾನು ಕೂಡ ಕೆಲವು ನ್ಯಾಯಾಧೀಶರ ಜೊತೆ ಮಾತನಾಡುವುದಕ್ಕೆ ಪ್ರಯತ್ನ ಮಾಡಿದೆ. ಈ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡುವುದರಿಂದ ಸಾರ್ವಭೌಮತ್ವಕ್ಕೆ ಧಕ್ಕೆ ಬರುತ್ತದೆ ಎನ್ನುವ ಒಂದು ಭಾವನೆಯನ್ನು ಅವರು ವ್ಯಕ್ತಮಾಡಿದ್ದಾರೆ. ಆದರೆ, ಸಾರ್ವಭೌಮತ್ವಕ್ಕೆ ಎನ್ನುವಂತಹ ಹೆಸರಿನಲ್ಲಿ ಲಿಟಿಗೇಟ್ ಪಬ್ಲಿಕ್ ಯಾರು ಇದ್ದಾರೆ ಅವರಿಗೆ ಆಗತಕ್ಕಂತಹ ತೊಂದರೆ ಬಗ್ಗೆ ಕಲ್ಪನೆ ಕೂಡ ನಮಗೆ ಇರಬೇಕು. ಪ್ರಜಾಪ್ರಭುತ್ವದ ಮೂಲಭೂತ ಅರ್ಥವೇ ಅದು. ಒಂದು ಕಾಲಕ್ಕೆ ಬೆಂಗಳೂರನ್ನು ರಾಜಧಾನಿ ಮಾಡಿದಾಗ ಉದ್ದೇಶ ಏನಾದರೂ ಇರಲಿ, ಒಳ್ಳೆಯ ಸದುದ್ದೇಶದಿಂದ ಮಾಡಿದ್ದರಿಂದ ಇಲ್ಲಿ ಒಂದು ನ್ಯಾಯಪೀಠವಿದೆ. ಈಗ ಉತ್ತರ ಕರ್ನಾಟಕದ ಜನಕ್ಕೆ ನ್ಯಾಯ ಪೀಠದ ಅಗತ್ಯವಿದೆ ಎನ್ನುವುದನ್ನು ನಾವು ಪರಿಪೂರ್ಣವಾಗಿ ಮನಗಂಡು ಈ ಒಂದು ಠರಾವನ್ನು ಮಾಡುತ್ತಿದ್ದೇವೆ. ಆದ್ದರಿಂದ ನಾನು ಮಾನ್ಯಮುಖ್ಯಮಂತ್ರಿಗಳಲ್ಲಿ ಕೇಳುವುದೇನೆಂದರೆ, ಈ ಒಂದು ತಿದ್ದುಪಡಿಯನ್ನು ನೀವೇ ಮಾಡಿದರೆ ಒಳ್ಳೆಯದು ಅಥವಾ ನಾನು ಮಾಡುತ್ತೇನೆ, ಅದನ್ನು ಒಪ್ಪಿಕೊಳ್ಳಿ ಎಂದು ಕೇಳುತ್ತೇನೆ. ತಿದ್ದುಪಡಿ ಇಷ್ಟೇ ಇದು ನಿಮ್ಮ ಉದ್ದೇಶಕ್ಕೆ ಭಂಗ ಬರುವುದಿಲ್ಲ. ಉತ್ತರ ಕರ್ನಾಟಕ ಎನ್ನುವ ಬದಲು ಕರ್ನಾಟಕದ ಉತ್ತರ ಭಾಗದಲ್ಲಿ ಎಂದು ತಿದ್ದುಪಡಿ ಮಾಡುವುದು ಸರಿಯೆಂದು ನನ್ನ ಅನಿಸಿಕೆ. ಅದನ್ನು ನಿಮಗೆ ಬಿಡುತ್ತೇನೆ. ಈ ಒಂದು ಒಟ್ಟಾರೆ ಠರಾವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

+ ಶ್ರೀ ಆರ್.ವಿ.ದೇಶಪಾಂಡೆ: (ಹಲಿಯಾಳ):- ಸನ್ಮಾನ್ಯ ಸಭಾಧ್ಯಕ್ಷೆಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯ ತಂದಿದ್ದಾರೆ ಅದನ್ನು ಸ್ವಾಗತ ಮಾಡುತ್ತಾ, ಕೆಲವು ವಿಚಾರಗಳನ್ನು ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದು ಬಹಳ ವರ್ಷದ ಒಂದು ಬೇಡಿಕೆ. ಉಚ್ಚ ನ್ಯಾಯಾಲಯದ ಪೀಠ ಉತ್ತರ ಕರ್ನಾಟಕದಲ್ಲಿ ಸ್ಥಾಪನೆಯಾದರೆ ಬಹಳ ವರ್ಷಗಳ ಕನಸು ನನಸು ಆದ ಹಾಗೆ ಆಗುತ್ತದೆ. ನಿಜವಾಗಲೂ ನಾವೆಲ್ಲರೂ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಈ ದೃಷ್ಟಿಯಿಂದ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಈಗಾಗಲೇ ನಮ್ಮ ನಾಯಕರು ಹೇಳಿದ ಹಾಗೆ, ಸರ್ವೋಚ್ಚ ನ್ಯಾಯಾಲಯದ ಪೀಠ ದಕ್ಷಿಣ ಹಿಂದೂಸ್ಥಾನದಲ್ಲಿ ಆಗಬೇಕು ಎನ್ನುವುದು ಬಹಳ ವರ್ಷಗಳಿಂದ ಇರತಕ್ಕ ಬೇಡಿಕೆ. ಆದರೆ ಇದರ ಬಗ್ಗೆ ರಾಜ್ಯಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿರುವುದು ಕಂಡುಬರಲಿಲ್ಲ. ಹಾಗಾದರೆ ಆ ಬಗ್ಗೆ ಸಹ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿರುವುದು ಕಂಡುಬರಲಿಲ್ಲ. ಹಾಗಾದರೆ ಆ ಬಗ್ಗೆ ಸಹ ರಾಜ್ಯ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡು ದಕ್ಷಿಣ ಹಿಂದೂಸ್ಥಾನದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಸರ್ವೋಚ್ಚ ನ್ಯಾಯಾಲಯದ ಒಂದು ಪೀಠ ಆಗುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ನಮ್ಮ ಪಕ್ಷ ಅದಕ್ಕೆ ಸಂಪೂರ್ಣವಾಗಿ ಸಹಕಾರ ಕೊಡುತ್ತದೆಂದು ಈ ಸಂದರ್ಭದಲ್ಲಿ ನಾನು ಭರವಸೆ ಕೊಡುತ್ತಿದ್ದೇನೆ. ಅದೇ ಪ್ರಕಾರ ಈಒಂದು ಉಚ್ಚ ನ್ಯಾಯಾಲಯದ ಅವಶ್ಯಕತೆ ಬಹಳ ಇದೆ. ಏಕೆಂದರೆ ಇವತ್ತು ಉತ್ತರ ಕನ್ನಡ ಜಿಲ್ಲೆಯಾಗಲಿ, ಬೆಳಗಾವಿಯಾಗಲಿ, ಬಿಜಾಪುರವಾಗಲಿ, ಧಾರವಾಡವಾಗಲಿ ಅಥವಾ ಗುಲ್ಬರ್ಗವಾಗಲಿ ಈ ಭಾಗದ ಜನ ಬೆಂಗಳೂರಿಗೆ ಬಂದು ನ್ಯಾಯ ಪಡೆಯಬೇಕಾದರೆ ಬಹಳ ಕಷ್ಟವಾಗುತ್ತದೆ. ಅದು ನ್ಯಾಯ ಶೂನ್ಯವಾದುದಲ್ಲ, ಸಾಕಷ್ಟು ಹಣ ಖರ್ಚು ಮಾಡಬೇಕು, ವ್ಯಾಜ್ಯಗಳು ಸಾಕಷ್ಟು ವರ್ಷಗಳ ಕಾಲ ನಡೆಯುತ್ತದೆ. ಹಾಗಾಗಿ justice delayed is justice denied. ಆಗುತ್ತಿದೆ. ಆದಕಾರಣ ಈ ಉಚ್ಚ ನ್ಯಾಯಾಲಯದ ಮೇಲೆ ಏನೂ ಟೀಕೆ

ಟಿಪ್ಪಣಿ ಮಾಡುತ್ತಿಲ್ಲ. ಆದರೆ, ಇವತ್ತು ನಮ್ಮ ಪಾಲಿಸಿ ಏನು ಇರಬೇಕೆಂದರೆ ನಾವು ಜನರ ತನಕ ಹೋಗಿ, ಜನರ ಬಾಗಿಲ ತನಕ ಹೋಗಿ ನ್ಯಾಯ ಕೊಡುವ ಒಂದು ಪದ್ಧತಿ ಇರಬೇಕು. ಹಾಗಾಗಿ ಇವತ್ತು ಜನರ ಅನುಕೂಲಕ್ಕೋಸ್ಕರವಾಗಿ ಆದಷ್ಟು ಬೇಗನೆ ಈ ಉಚ್ಚ ನ್ಯಾಯಾಲಯ ಆಗಬೇಕಾಗುತ್ತದೆ. ಇವತ್ತು ಕೆಲವು ಜನ ಬೀದರ್ ಜಿಲ್ಲೆಯಲ್ಲಿ ಆಗಬೇಕೆಂದು ಹೇಳುತ್ತಾರೆ, ಕೆಲವರು ಬೆಳಗಾವಿಯಲ್ಲಿ ಆಗಬೇಕೆಂದು ಹೇಳುತ್ತಾರೆ, ಇನ್ನು ಕೆಲವರು ಹುಬ್ಬಳ್ಳಿಯಲ್ಲಿ ಆಗಬೇಕೆಂದು ಹೇಳುತ್ತಾರೆ. ಕಾರವಾರದಲ್ಲಿ ಆದರೆ ನನಗೆ ಬಹಳ ಸಂತೋಷವಾಗುತ್ತಿತ್ತು. ಆದರೆ ಅಲ್ಲಿ ಅದು ಆಗುವುದಕ್ಕೆ ಬರುವುದಿಲ್ಲ ಕಷ್ಟವಿದೆ ಎಂದು ನನಗೆ ಗೊತ್ತಿತ್ತು. ಹಾಗಾಗಿ ನನ್ನ ದೃಷ್ಟಿಯಿಂದ ಕನ್‌ವೀನಿಯಂಟ್ ಪ್ಲೇಸ್ ಆದ ಹುಬ್ಬಳ್ಳಿಯಲ್ಲಿ ಆದರೆ ಒಳ್ಳೆಯದು. ಇದು ಬಹಳ ಕನ್‌ವೀನಿಯೆಂಟ್ ಪ್ಲೇಸ್ ಆಗಬಹುದು ಎಂದು ನನ್ನ ಒಂದು ಅನಿಸಿಕೆ. ಬೆಳಗಾಂನಲ್ಲಿ ಆಗಬೇಕೆಂದು ಡಿಮ್ಯಾಂಡ್ ಇದ್ದುದ್ದು ನನಗೆ ಗೊತ್ತಿದೆ. ಆದರೆ, ಬೆಳಗಾಂ ಒಂದು ಕಡೆ ಆಗುತ್ತದೆ. ಇವತ್ತು ಹುಬ್ಬಳ್ಳಿಯಲ್ಲಿ ಮಾಡಿದರೆ, ವಿಜಾಪುರವಾಗಲಿ, ಬೀದರ್ ಆಗಲಿ, ನಾರ್ತ್ ಕೆನರ ಆಗಲಿ, ಬೆಳಗಾಂ ಆಗಲಿ ಅದು ಒಂದು ಸೆಂಟರ್ ಆಗುತ್ತದೆ. ಹಾಗಾಗಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಬಿ.ಸ್ವಾಮಿರಾವ್:- ಶಿವಮೊಗ್ಗದಲ್ಲಿ ಆದರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ:- ಕಾರವಾರದಲ್ಲಿ ಮಾಡಿದರೆ ಬಹಳ ಒಳ್ಳೆಯದು ಆಗುತ್ತದೆ, ಸಿರಸಿಯಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಹೇಳಿದೆ. ಹಾಗಾಗಿ ಹುಬ್ಬಳ್ಳಿಯಲ್ಲಿ ಮಾಡಿದರೆ ಎಲ್ಲರಿಗೂ ಅನುಕೂಲ ಆಗಬಹುದು ಎಂದು ನನ್ನ ಅನಿಸಿಕೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗನೆ ಕ್ರಮ ಕೈಗೊಳ್ಳಬೇಕು. ಕೇವಲ ರೆಸಲ್ಯೂಷನ್ ಮಾಡಿದರೆ ಸಾಲದು. ರೆಸಲ್ಯೂಷನ್ ಮಾಡಿ ನಮ್ಮ ಕಡೆಯಿಂದ ಮಾನ್ಯ ಮುಖ್ಯಮಂತ್ರಿಗಳು ಚಪ್ಪಾಳೆ ತೆಗೆದುಕೊಂಡಿರಬಹುದು. ಆದರೆ, ಜನರಿಗೆ ಸಮಾಧಾನ ಆಗಲಿಲ್ಲ. ಯಾವಾಗ ಪೀಠ ಸ್ಥಾಪನೆಯಾಗುತ್ತದೆ ಆಗ ನಿಜವಾಗಿ ಅಭಿನಂದನೆ ಕೊಡುವುದಕ್ಕೆ ಬರುತ್ತದೆ. ಹಾಗಾಗಿ ರೆಸಲ್ಯೂಷನ್ ಆದ ತಕ್ಷಣ ತಾವು ಕ್ರಮ ತೆಗೆದುಕೊಳ್ಳಬೇಕು. ಮತ್ತು ಬಹಳ ವರ್ಷಗಳ ಒಂದು ಕನಸು ನನಸು ಮಾಡಲಿಕ್ಕೆ ಸಹಕಾರಿ ಆಗಬೇಕು ಎಂದು ಕೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್: (ಹಿರಿಯೂರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ಏನು ನಿರ್ಣಯವನ್ನು ತಂದಿದ್ದಾರೆ, ಅದು ಸಕಾಲಿಕವಾಗಿದೆ ಮತ್ತು ಯೋಗ್ಯವಾಗಿದೆ ಎನ್ನುವ ಮಾತನ್ನು ಹೇಳುತ್ತಾ, ಈ ಒಂದು ಕೆಲಸ ಬಹಳ ಹಿಂದೆಯೇ ಆಗಬೇಕಾಗಿತ್ತು. ಇದಕ್ಕಾಗಿ ಬೇಡಿಕೆ ಕರ್ನಾಟಕದಲ್ಲಿ ಬಹಳ ಹಿಂದಿನ ದಿವಸದಿಂದಲೂ ಇದೆ. ನಾನು ಮಾನ್ಯ ಮುಖ್ಯಮಂತ್ರಿಗಳ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಒಂದು ಸಣ್ಣ ಸಲಹೆಯನ್ನು ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಅವರ ನಿರ್ಣಯದಲ್ಲಿ ' This House to consider establishment of a permanent bench of the High Court of Karnataka in North Karnataka Area'. ಎನ್ನತಕ್ಕಂಥ ಮಾಡನ್ನು ಆಡಿದ್ದಾರೆ. ನಾರ್ತ್ ಕರ್ನಾಟಕ ಏರಿಯ ಎನ್ನತಕ್ಕಂಥದ್ದು ಮನಸ್ಸಿಗೆ ಸ್ವಲ್ಪ ಹಿಡಿಸಲಾರದೆ ಇರತಕ್ಕಂಥದ್ದು. ಅದನ್ನು ಬಿಟ್ಟು ನೇರವಾಗಿಯೇ at Dharwad ಎನ್ನುವ ಮಾತನ್ನು ಹೇಳಬೇಕಾಗಿತ್ತು. ಕರ್ನಾಟಕಕ್ಕೆ ಮತ್ತೊಂದು ಉಚ್ಚ ನ್ಯಾಯಾಲಯದ ಪೀಠ ಏನು ಆಗಬೇಕಾಗಿದೆ, ಅದು ಅವಶ್ಯಕ ಇರುವುದರಿಂದ ಬೇಗನೆ ಮಾಡಬೇಕು. ನಾನು ಏತಕ್ಕಾಗಿ ನಾರ್ತ್ ಕರ್ನಾಟಕ ಏರಿಯಾ ಅನ್ನುವ ಮಾತನ್ನು ಬೇಡ ಎಂದು ಹೇಳುತ್ತಿದ್ದೇನೆ ಅಂದರೆ, ನನಗೆ ವೈಯಕ್ತಿಕವಾಗಿ ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸುವಂತಹ ಒಂದು ಅವಕಾಶ ದೊರೆತಿತ್ತು. ಆದರೆ ತದನಂತರ ಕೆಲವು ಮಾತುಗಳನ್ನು ಕೇಳಿದಾಗ ಮನಸ್ಸಿಗೆ ಬೇಸರವಾಯಿತು. ನಾರ್ತ್ ಕರ್ನಾಟಕ, ಸೌತ್ ಕರ್ನಾಟಕ, ಹಾಗೆ , ಹೀಗೆ, ಎಂದು ಹೇಳಿ, ಕರ್ನಾಟಕ ಒಂದೇ ಅನ್ನುವ ಭಾವನೆಗೆ ಒಡಕು ಧ್ವನಿ ಬರುತ್ತಾ

ಇರುವುದರಿಂದ, ಈ ಮಾತಿಗೆ ಬದಲಾಗಿ ನೇರವಾಗಿ ಮಾನ್ಯ ಮುಖ್ಯಮಂತ್ರಿಗಳು A bench of the High Court of Karnataka at Dharwad. .. ಎನ್ನುವ ಮಾತನ್ನು ಹೇಳಲಿ. ಈಗ ಮಹಾರಾಷ್ಟ್ರದಲ್ಲಿ ನಾಸಿಕ್‌ನಲ್ಲಿ ಒಂದು ಹೈಕೋರ್ಟ್ ಪೀಠವಿದೆ, ಔರಂಗಾಬಾದ್‌ನಲ್ಲಿಒಂದು ಪೀಠ ಇದೆ, ಬೊಂಬಾಯಿನಲ್ಲೂ ಒಂದು ಹೈಕೋರ್ಟ್ ಇದೆ. ಬೊಂಬಾಯಿನ ಹೈಕೋರ್ಟ್ ಗೋವಾದ ಒಂದು ವ್ಯಾಪ್ತಿಯನ್ನು ನೋಡುತ್ತಿದೆ. ಹೀಗಿರುವಾಗ ಬೆಂಗಳೂರಿನಲ್ಲಿ ಒಂದು ಹೈಕೋರ್ಟ್ ಇದೆ. ಧಾರವಾಡದಲ್ಲಿ ಒಂದು ಪೀಠ ಆಗಬೇಕು. ಧಾರವಾಡ ಎಂದು ನಾನು ಏಕೆ ಹೇಳುತ್ತಿದ್ದೇನೆ ಎಂದರೆ,ಧಾರವಾಡಕ್ಕೆ ಒಂದು ಐತಿಹಾಸಿಕ ಚರಿತ್ರೆ ಇದೆ, ಒಂದು ಹಿನ್ನೆಲೆ ಇದೆ. ಕರ್ನಾಟಕ ಏಕೀಕರಣದ ಆಂಧೋಲನ ಆ ಭಾಗದಿಂದ ಪ್ರಾರಂಭ ಆಗಿದ್ದಿತು. ಅಲ್ಲಿ ಒಂದು ವಿಶ್ವವಿದ್ಯಾನಿಲಯ ಇದೆ ಮತ್ತು ಎಲ್ಲಾ ಅನುಕೂಲಗಳು ಇರುವುದರಿಂದ ಅಲ್ಲಿ ಆಗಬೇಕು. ಮಾನ್ಯ ದೇಶಪಾಂಡೆಯವರು ಹುಬ್ಬಳ್ಳಿಯಲ್ಲಿ ಆಗಬೇಕು ಎಂದು ಹೇಳಿದ್ದಾರೆ. ಹುಬ್ಬಳ್ಳಿ ಒಂದು ವ್ಯಾಪಾರ ಸ್ಥಳ, ಅಷೊಂದು ಯೋಗ್ಯವಲ್ಲ, ಎನ್ನುವಂಥ ದೃಷ್ಟಿಯಿಂದ ನನ್ನ ಸಲಹೆ ಏನೆಂದರೆ, ನಾರ್ತ್ ಕರ್ನಾಟಕ ಏರಿಯ ಎನ್ನುವುದನ್ನು ಬಿಟ್ಟು, ನೇರವಾಗಿ ಧಾರವಾಡ ಎಂದು ಸಲಹೆಯನ್ನು ಮಾಡಿದರೆ ಮುಂದೆ ಯಾವ ಜಿಜ್ಞಾಸೆಗೂ ಅವಕಾಶ ಕೊಡುವುದಿಲ್ಲ. ಅಷ್ಟೇ ಅಲ್ಲ, ರಾಜಕೀಯವಾಗಿ ಗುಲ್‌ಬರ್ಗಾದಲ್ಲಿ ಆಗಲಿ, ಬೀದರ್‌ನಲ್ಲಿ ಆಗಲಿ, ಬೆಳಗಾಂನಲ್ಲಿ ಆಗಲಿ ಎಂದು ಮತ್ತೆ ಮತ್ತೆ ಇನ್ನೂ ಬೇರೆ ಬೇರೆ ವಿಚಾರಗಳಿಗೆ ಅದು ಅವಕಾಶ ಕೊಡಬಹುದು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇಷ್ಟನ್ನು ಸಲಹೆ ಮಾಡುತ್ತಾ, ಸೂಕ್ತವಾದ ಕಾಲದಲ್ಲಿ ಸಕಾಲದಲ್ಲಿ ತಂದಿರತಕ್ಕಂಥ ಈ ನಿರ್ಣಯಕ್ಕೆ ನನ್ನ ಒಂದು ಬೆಂಬಲವನ್ನು ಕೊಟ್ಟು, ಈ ಒಂದು ತಿದ್ದುಪಡಿಯನ್ನು ಮಾನ್ಯ ಮುಖ್ಯಮಂತ್ರಿಗಳು ಮನಸ್ಸಿನಲ್ಲಿ ಇಟ್ಟುಕೊಂಡು, ಅವರು ಅದಕ್ಕೆ ಗಮನ ಕೊಡಬೇಕೆಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಶಿವಾನಂದ ಹೆಚ್.ಕೌಜಲಗಿ:(ಬೈಲಹೊಂಗಲ):- ಸನ್ಮಾನ್ಯ ಉಪಾಧ್ಯಕ್ಷೀಣಿಯವರೆ, ಇವತ್ತು ನಿಜವಾಗಿಯೂ ನಮಗೆಲ್ಲಾ ಬಹಳ ಸಂತೃಪ್ತಿಯಾಗಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಬೆಂಚನ್ನು ಪ್ರಾರಂಭಿಸುವ ಸಲುವಾಗಿ ತಂದಿರುವಂಥ ನಿರ್ಣಯ ನಿಜವಾಗಿಯೂ ಬಹಳ ಸ್ವಾಗತಾರ್ಹವಾದುದು. ಮಾನ್ಯ ಹಿರಿಯ ಸದಸ್ಯರು ಹೇಳಿದ ಪ್ರಕಾರ ಈಗ ನಿರ್ಣಯ ಏನು ಬಂದಿದೆ ಇದಕ್ಕಿಂತಲೂ ಮೊದಲು ನಮ್ಮ ಉತ್ತರ ಕರ್ನಾಟಕದಲ್ಲಿ ಈ ಹೈ ಕೋರ್ಟ್ ಬೆಂಚು ಎಂದೋ ಸ್ಥಾಪನೆ ಆಗಬೇಕಾಗಿತ್ತು. ಆದರೆ ಕೆಲವು ಕಾರಣಾಂತರದಿಂದ ಅಲ್ಲಿ ಆಗಲಿಲ್ಲ. ಶ್ರೀ ಯಶವಂತಸಿಂಗ್ ಸಮಿತಿಯವರೂ ಕೂಡ ಈ ಬೆಂಗಳೂರನ್ನು ಬಿಟ್ಟು ಬೇರೆ ಕಡೆ ಒಂದು ಹೈಕೋರ್ಟ್ ಬೆಂಚನ್ನು ಸ್ಥಾಪನೆ ಮಾಡಬೇಕೆಂದು ವರದಿಯನ್ನೂ ಕೂಡ ಕೊಟ್ಟಿದ್ದಾರೆಂದು ನಾನು ತಮಗೆ ತಿಳಿಸಬಯಸುತ್ತೇನೆ. ನಿನ್ನೆಯ ದಿವಸ ರೂಲ್ 68ರ ಕೆಳಗೆ ನಾನು, ಮಾನ್ಯ ಬನ್ನಿಕೋಡ್‌ರವರೂ, ವಿ.ಎಸ್.ಕೌಜಲಗಿಯವರೂ ಮತ್ತು ಮಾನ್ಯ ಜಕನೂರ್‌ರವರೂ ಸೇರಿಕೊಂಡು ಇವತ್ತು ಈ ವಿಷಯವನ್ನು ಇಲ್ಲಿ ಚರ್ಚೆ ಮಾಡಬೇಕೆಂದು ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇವೆ. ನಂತರ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡುತ್ತಾ ಇದರ ಬಗ್ಗೆ ನಾವು ಒಂದು ನಿರ್ಣಯವನ್ನು ಸರ್ಕಾರದ ವತಿಯಿಂದ ತರುತ್ತೇವೆಂದು ಹೇಳಿದ್ದರು. ಆ ಪ್ರಕಾರವೇ ಅವರು ನಡೆದುಕೊಂಡಿದ್ದಾರೆ. ಈಗ ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದಂತೆ ಮಹಾರಾಷ್ಟ್ರದಲ್ಲಿ, ಉತ್ತರ ಪ್ರದೇಶದಲ್ಲಿ ಹಾಗೂ ಆಂಧ್ರದಲ್ಲಿ ಕೂಡ ಒಂದಕ್ಕಿಂತ ಹೆಚ್ಚಿಗೆ ಹೈ ಕೋರ್ಟ್ ಬೆಂಚುಗಳಿವೆ. ತ್ವರಿತವಾಗಿ ನ್ಯಾಯ ನಿರ್ಣಯವನ್ನು ಕೊಡುವುದಕ್ಕೋಸ್ಕರ ಬೆಂಗಳೂರನ್ನು ಬಿಟ್ಟು ಬೇರೆ ಕಡೆಯಲ್ಲಿ ಉಚ್ಚ ನ್ಯಾಯಾಲಯದ ಒಂದು ಶಾಖೆ ಅವಶ್ಯಕವೆಂದು ನಾನು ಹೇಳಬಯಸುತ್ತೇನೆ. ಇವತ್ತು ತಮಗೆ ಗೊತ್ತಿರುವಂತೆ ಹುಬ್ಬಳ್ಳಿ ವಕೀಲರ ಸಂಘದವರು ಮತ್ತು ಅಲ್ಲಿಯ ಸ್ಥಳೀಯ ಜನರೂ ಕೂಡ ಬಹಳ ದಿವಸಗಳಿಂದ ಉಪವಾಸ ಮುಷ್ಕರವನ್ನು ಮಾಡುತ್ತಿದ್ದಾರೆ. ಇದೇರೀತಿ ಬೆಳಗಾಂನವರೂ ಕೂಡ ಉಪವಾಸ ಸತ್ಯಾಗ್ರಹ ಕುಳಿತಿದ್ದರು. ನಮ್ಮಲ್ಲಿ ಒಂದು

ಹೈ ಕೋರ್ಟ್ ಬೆಂಚು ಸ್ಥಾಪನೆ ಆಗುವುದಿಲ್ಲ ಯಾವುದೇ ರೀತಿಯ ಭಿನ್ನಾಭಿಪ್ರಾಯವೂ ಇಲ್ಲ. ಬೆಳಗಾಂಗೆ ಆಗಲಿ, ಧಾರವಾಡಕ್ಕಾಗಲಿ, ಅಥವಾ ಬೇರೆ ಎಲ್ಲೇ ಆಗಲಿ ಮುಖ್ಯವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಬೆಂಚು ಸ್ಥಾಪನೆ ಆಗಬೇಕು. ಇದು ನಮ್ಮ ಮೊದಲನೇ ಬೇಡಿಕೆ. ಆ ನಂತರ ಇದಕ್ಕೆ ಒಂದು ಯೋಗ್ಯ ಸ್ಥಳ ಬೆಳಗಾಂ ಎಂದು ಕಂಡುಬಂದರೆ ಅಲ್ಲಿ ಮಾಡಿ, ಧಾರವಾಡ ಎಂದು ಕಂಡುಬಂದರೆ ಅಲ್ಲಿ ಮಾಡಿ. ಆದರೆ ಇದರ ಬಗ್ಗೆ ನಾವು ಭಿನ್ನಾಭಿಪ್ರಾಯವನ್ನು ಮಾಡತಕ್ಕ ಸ್ಥಿತಿಯಲ್ಲಿಲ್ಲ. ಆದುದರಿಂದ ಎಲ್ಲ ಜನರಿಗೂ ಅನುಕೂಲವಾಗುವಂಥ ರೀತಿಯಲ್ಲಿ ಒಂದು ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಹಿಂದೆ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಬೆಳಗಾಂ ಗಡಿ ಪ್ರದೇಶವಾಗಿರುವುದಿರಿಂದ ಡಿವಿಷನ್ ಹೆಡ್‌ಕ್ವಾರ್ಟರ್ಸ್ ಕೂಡ ಧಾರವಾಡದಿಂದ ಇನ್ನೂ ಬೇರೆ ಬೇರೆಯಕಡೆಯಿಂದ ಬೆಳಗಾಂಗೆ ವರ್ಗಾವಣೆಮಾಡಿದರು. ಇರಿಗೆಷನ್ ಚೀಫ್‌ಇಂಜಿನಿಯರ್, ಕೆ.ಇ.ಬಿ ಚೀಫ್ ಇಂಜಿನಿಯರ್ ಇನ್ನೂ ಮುಂತಾದವರನ್ನೆಲ್ಲಾ ಆ ಸಂದರ್ಭದಲ್ಲಿ ಬೆಳಗಾಂಗೆ ವರ್ಗಾವಣೆ ಮಾಡಿದ್ದರು. ಒಂದೇ ಒಂದು ಉದ್ದೇಶ ಎಂದರೆ , ಬೆಳಗಾಂನಲ್ಲಿರತಕ್ಕ ಗಡಿ ಪ್ರದೇಶವನ್ನು ಬೆಳೆಸಬೇಕೆಂಬ ಉದ್ದೇಶದಿಂದ ಹಾಗೂ ಜನರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ, ಡಿವಿಜನಲ್ ಹೆಡ್‌ಕ್ವಾರ್ಟರ್ಸ್ ಇದು ಆಗಿರುವುದರಿಂದ ಅಲ್ಲಿ ಮಾಡಬೇಕೆಂದು ಒಂದು ನಿರ್ಣಯವನ್ನೇ ತೆಗೆದುಕೊಂಡರು. ಇವತ್ತು ಮೊದಲನೆಯದಾಗಿ ಸರ್ಕಾರದವರು ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಬೆಂಚನ್ನು ಪ್ರಾರಂಭ ಮಾಡಬೇಕು, ಇದಕ್ಕೆ ಬೆಳಗಾಂ ಒಳ್ಳೆಯ ಯೋಗ್ಯ ಸ್ಥಳ ಎಂದು ನನಗನಿಸುತ್ತದೆ. ಒಂದು ವೇಳೆ ಬೆಳಗಾಂ ಯೋಗ್ಯಸ್ಥಳವಲ್ಲದಿದ್ದರೆ ಧಾರವಾಡದಲ್ಲಿ ಮಾಡಿದರೂ ನಮಗೆ ಸಂತೋಷವಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಜೊತೆ ಮಾತನಾಡಿ ಅವರ ಮನಸ್ಸನ್ನು ಒಲಿಸಬೇಕು. ರೈಟಿಂಗಿಗಿಂತಲೂ ಅವರಿಗೆ ತಿಳಿಸಿ ಹೇಳಿ ಅವರ ಮನವೊಲಿಸಬೇಕು. ಹೈಕೋರ್ಟಿನ ಒಪೀನಿಯನ್ ನಮ್ಮ ಅನುಕೂಲದ ಪರವಾಗಿ ತೆಗೆದುಕೊಂಡು ಅದರ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ನಮ್ಮ ಎಂ.ಪಿ.ಗಳ ಮುಖಾಂತರ ಹಾಗೂ ಮಾನ್ಯ ಮುಖ್ಯಮಂತ್ರಿಗಳು ತಮ್ಮ ವರ್ಚಸ್ಸನ್ನು ಬೀರಿ ಆದಷ್ಟು ಬೇಗ ಉತ್ತರ ಕರ್ನಾಟಕದಲ್ಲಿ ಹೈ ಕೋರ್ಟ್ ಬೆಂಚನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂಥ ಈ ನಿರ್ಣಯ ಬಹಳ ಸ್ವಾಗತಾರ್ಹ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿ ಆಗಿದ್ದ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಒಂದು ಹೈ ಕೋರ್ಟ್ ಬೆಂಚು ಆಯಿತು ಎಂದು ಜನರ ಮನಸ್ಸಿನಲ್ಲಿ ಕೊನೆಯವರೆಗೂ ಒಂದು ನೆನಪು ಉಳಿಯುವಂತೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರಿ ಪಿ.ಸಿ.ಸಿದ್ದನಗೌಡರ (ಕಲಘಟಗಿ) :- ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಮುಖ್ಯಮಂತ್ರಿಗಳು ಇವತ್ತಿನ ದಿವಸ ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಹೈಕೋರ್ಟ್ ಬೆಂಚು ಆಗಬೇಕೆಂಬ ಬಗ್ಗೆ ಏನೊಂದು ನಿರ್ಣಯವನ್ನು ತಂದಿದ್ದಾರೆ ಇದು ಸ್ವಾಗತಾರ್ಹವಾದುದು. ಇದು ಹುಬ್ಬಳ್ಳಿ ಧಾರವಾಡ ಮಹಾ ನಗರದ ಮಧ್ಯದಲ್ಲಿ ಆಗಬೇಕೆಂದು ಹುಬ್ಬಳ್ಳಿ ಕಾರ್ಪೋರೇಷನ್‌ನವರು ಒಂದು ಕಟ್ಟಡವನ್ನೂ ಕೂಡ ಕೊಟ್ಟಿದ್ದಾರೆ. ಇದು ಸ್ವಾಭಾವಿಕ, ಅವರವರ ಜಿಲ್ಲೆಯ ಅಭಿಮಾನದಿಂದ ಅವರವರು ಕೇಳಿದ್ದಾರೆ. ಅದೇ ರೀತಿ ಬೆಳಗಾಂನವರೂ ಕೂಡ ಕೇಳಿದ್ದಾರೆ. ಬೀದರ್‌ನವರೂ ಕೂಡ ತಮ್ಮ ಜಿಲ್ಲೆಗೆ ಆಗಬೇಕೆಂದು ಹೇಳುತ್ತಾರೆ. ನನಗೆ ತಿಳಿದಮಟ್ಟಿಗೆ ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಬೆಂಚನ್ನು ಸ್ಥಾಪನೆ ಮಾಡುವುದು ಸೂಕ್ತವೆಂದು ಅನಿಸುತ್ತದೆ. ಬಾರ್ ಅಸೋಸಿಯೇಷನ್‌ನವರೂ ಕೂಡ ಇದೇ ರೀತಿಯ ಒಂದು ನಿರ್ಣಯವನ್ನು ಮಾಡಿದ್ದಾರೆಂದು ತಿಳಿದು ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅವಧಿಯಲ್ಲಿ ಕೇವಲ ಈ ಒಂದು ಠರಾವನ್ನು ಮಾತ್ರ ಮಾಡಿದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವರು ದಿಲ್ಲಿಯ ಮಟ್ಟಕ್ಕೆ ಹೋಗಿ ತಮ್ಮ ಪ್ರಯತ್ನವನ್ನು ಮಾಡಬೇಕು.

ಈ ಸದನದಲ್ಲಿ ನಾವು ನಿರ್ಣಯವನ್ನು ಏನುಮಾಡುತ್ತೇವೆ ಅದು ಇಷ್ಟಕ್ಕೇ ಉಳಿಯಬಾರದು. ಇದರ ಬಗ್ಗೆ ಹಿರಿಯ ಸದಸ್ಯರಾದ ಮಾನ್ಯ ರಂಗನಾಥ್‌ರವರೂ ಮತ್ತು ಮಾನ್ಯ ಕೌಜಲಗಿಯವರೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯಮುಖ್ಯಮಂತ್ರಿಗಳು ಪ್ರಯತ್ನ ಮಾಡಿ ಹುಬ್ಬಳ್ಳಿ ಧಾರವಾಡದ ಮಧ್ಯದಲ್ಲಿ ಮಾಡಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಕಾರ್ಪೊರೇಷನ್‌ನವರೂ ಕೂಡ ಒಳ್ಳೆಯ ಒಂದು ಬಿಲ್ಡಿಂಗ್‌ನ್ನು ಈಗಾಗಲೇ ಠರಾವು ಮಾಡಿ ಕೊಟ್ಟಿದ್ದಾರೆ. ಇದು ಯೋಗ್ಯವಾದ ಜಾಗವಾಗಿದೆ. ಉತ್ತರ ಕರ್ನಾಟಕ ಎಂದು ಹೇಳುವ ಬದಲು ಹುಬ್ಬಳ್ಳಿ ಧಾರವಾಡವೆಂದು ಹೇಳಿ ತಾವು ಮಾಡಿಸ್ಕೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಂಡು ನನಗೆ ಎರಡು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರಿ ಬಸವರಾಜ್ ಪಾಟೀಲ್ ಅಟ್ಟೂರ್ :(ಬಸವಕಲ್ಯಾಣ):- ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದಲ್ಲಿ ಒಂದು ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡುವ ಒಂದು ನಿರ್ಣಯಕ್ಕೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ, ಈ ಉಪ ಪೀಠವನ್ನು ಸ್ಥಾಪನೆ ಮಾಡುವಂಥ ವಿಷಯ ಬಹಳ ಮೆಚ್ಚುವಂಥದ್ದು ಮತ್ತು ಸ್ವಾಗತ ಮಾಡುವಂಥಾದ್ದು ಆಗಿದೆ. ಈ ಒಂದು ಸಂದರ್ಭದಲ್ಲಿ ಈಗಾಗಲೇ ಸದನದ ಹಲವಾರು ಮಾನ್ಯ ಸದಸ್ಯರುಗಳು ಅವರವರ ವಿಚಾರಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ನಾನು ನನ್ನ ವೈಯಕ್ತಿಕವಾದ ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ಹಿಂದುಳಿದಂಥ ಭಾಗದಲ್ಲಿ ಉಚ್ಚ ನ್ಯಾಯಾಲಯದ ಒಂದು ಉಪಪೀಠವನ್ನು ಸ್ಥಾಪನೆ ಮಾಡುವುದು ಬಹಳ ಯೋಗ್ಯವಾದುದೆಂದು ನಾನು ತಿಳಿದುಕೊಂಡಿದ್ದೇನೆ. ಇದರಲ್ಲಿ ವೈಯಕ್ತಿಕವಾಗಿ ನಾನು ಹೇಳಬೇಕಾದರೆ, ಹೈದರಾಬಾದ್ ಕರ್ನಾಟಕ ಬಾಗ ಬಹಳ ಹಿಂದುಳಿದಂಥ ಭಾಗವಾಗಿದೆ. ಈ ಭಾಗದ ಅಭಿವೃದ್ಧಿಗೋಸ್ಕರ ನಾವು ಬೆಂಗಳೂರಿಗೆ ಬರಬೇಕು ಮತ್ತು ಹುಬ್ಬಳ್ಳಿಗೆ ಬರಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆ ದೃಷ್ಟಿಕೋನವನ್ನಿಟ್ಟುಕೊಂಡು ಮೊಟ್ಟಮೊದಲನೆಯಾಗಿ ಪ್ರಪೋಸಲ್ಸ್ ಏನಿದೆ ಗುಲ್ಬರ್ಗಾದಲ್ಲಿ ಮಾಡಿದರೆ ಒಳ್ಳೆಯದಾಗುತ್ತದೆನ್ನುವುದು ನನ್ನ ಭಾವನೆ ಎಂದು ಹೇಳುತ್ತೇನೆ. ಈ ಉಚ್ಚ ನ್ಯಾಯಾಲಯ ಉಪಪೀಠವನ್ನು ಸ್ಥಾಪನೆ ಮಾಡುವ ಬಗ್ಗೆ, ಈಗಾಗಲೇ ಹಲವಾರು ಮಾನ್ಯ ಸದಸ್ಯರು ಹೇಳಿದ್ದಾರೆ. ಹುಬ್ಬಳ್ಳಿ ಧಾರವಾಡವಾಗಲಿ, ಬೆಳಗಾಮ್ ಆಗಲಿ ಎಲ್ಲಿ ಮಾಡಿದರೂ ನಮ್ಮದೇನು ತಕರಾರು ಇಲ್ಲ, ಒಟ್ಟಿನಲ್ಲಿ ಒಂದು ಡೆವಲಪ್‌ಮೆಂಟ್ ಆಗುವ ದೃಷ್ಟಿಕೋನ ಇಟ್ಟುಕೊಂಡು ಅಂಥ ಒಂದು ಅಭಿವೃದ್ಧಿ ಮಾಡಿದ ಪಕ್ಷದಲ್ಲಿ.

ಶ್ರಿ ಕೆ.ಹೆಚ್.ರಂಗನಾಥ್:- ಕರ್ನಾಟಕ ಏಕೀಕರಣವಾದುದು 1956 ರ ನವೆಂಬರ್ ಒಂದರಲ್ಲಿ. ರಾತ್ರಿ ಗುಲ್ಬರ್ಗಾದಲ್ಲಿ ಬಸ್ಸನ್ನು ಹತ್ತಿದರೆ ಬೆಳಿಗ್ಗೆ ಇಲ್ಲಿರುತ್ತೀರಿ ತೊಂದರೆ ಏನು ಇಲ್ಲ.

ಶ್ರಿ ಬಸವರಾಜ ಪಾಟೀಲ್ ಅಟ್ಟೂರ್:-ತಾವು ಹೇಳುವುದು ಸೂಕ್ತವಾಗಿದೆ. ತಾವು ಮಾಜಿ ಮಂತ್ರಿಗಳು ಹೇಳುತ್ತಿದ್ದೀರಿ. ಡಿವಿಜನ್ ಮಟ್ಟದಲ್ಲಿ ಆದರೆ ಒಳ್ಳೆಯದು. ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಬೆಳಗಾಮ್ ಕರ್ನಾಟಕದಲ್ಲಿಯೇ ಇರಬೇಕು, ಅದು ಕನ್ನಡ ನಾಡಿನ ಒಂದು ಭಾಗವಾಗಿ ಇರಬೇಕಾದರೆ, ಡಿವಿಜನ್ ಮಟ್ಟದಲ್ಲಿ ಉಚ್ಚನ್ಯಾಯಾಲಯ ಪೀಠ ಏನಿದೆ ಅದು ಬೆಳಗಾಮ್‌ನಲ್ಲಿಯೇ ಆಗಬೇಕೆಂದು ನನ್ನ ಎರಡನೆಯ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಬಯಸುತ್ತೇನೆ. ಒಂದು ವೇಳೆ ನೀವು ಎಲ್ಲಿಯೋ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡಿದರೂ ಕೂಡ ನಮ್ಮದೇನು ವಿರೋಧವಿಲ್ಲ. ಉಚ್ಚನ್ಯಾಯಾಲಯದ ಪೀಠವನ್ನು ಸ್ಥಾಪನೆ ಮಾಡುವಂಥ ಸಂದರ್ಭದಲ್ಲಿ ನಮ್ಮ ಭಾಗದ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಉದಾಹರಣೆಗೆ ನಾವು ಬೀದರ್, ಗುಲ್ಬರ್ಗಾ ಜಿಲ್ಲೆಯವರು ಧಾರವಾಡಕ್ಕೆ ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಬೆಳಗಾಮ್‌ಗೆ ಹೋಗಬೇಕಾದರೂ ಕಷ್ಟವಾಗುತ್ತದೆ. ನಮ್ಮಲ್ಲಿ ಉಚ್ಚನ್ಯಾಯಾಲಯ ಪೀಠವನ್ನು ಬೇರೆ ಯಾವ ಕಡೆ ಸ್ಥಾಪನೆ ಮಾಡಿದರೂ ಕೂಡ ನಮಗೆ ಬೆಂಗಳೂರು ಹೈಕೋರ್ಟ್‌ನ್ನು ಕೊಟ್ಟುಬಿಟ್ಟರೆ ಒಳ್ಳೆಯದೆಂದು

ಹೇಳುತ್ತೇನೆ. ಏತಕ್ಕೆಂದರೆ ನಾವು 700 ಕಿಲೋಮೀಟರ್ ದೂರದಿಂದ ಬರಬೇಕೆಂದರೆ ಕಷ್ಟವಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್:(ಚಿತ್ರದುರ್ಗ):- ಶಿವಮೊಗ್ಗದವರು, ಧಾರವಾಡಕ್ಕೆ ಹೋಗುತ್ತಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಬೆಳಗಾಮ್‌ನಲ್ಲಿ ಮಾಡಿ,ಆದರೆ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯವರಿಗೆ ಬೆಂಗಳೂರಿಗೆ ಹಾಕಿಬಿಡಿ. ಎಲ್ಲಿಮಾಡಿದರೂ ನಮ್ಮ ವಿರೋಧವಿಲ್ಲ. ಕರ್ನಾಟಕದಲ್ಲಿ ಉಚ್ಚನ್ಯಾಯಾಲಯ ಪೀಠವಾಗುತ್ತದೆ. ಅದು ಸ್ವಾಗತಾರ್ಹವಾದುದು. ಯೋಗ್ಯವಾದ ಸ್ಥಳ ಪರಿಶೀಲನೆ ಮಾಡಿ. ನನ್ನ ವೈಯಕ್ತಿಕವಾದ ಅಭಿಪ್ರಾಯದ ಪ್ರಕಾರ ಮೊದಲನೆಯದಾಗಿ ಗುಲ್ಬರ್ಗಾ, ಎರಡನೆಯದಾಗಿ ಬೆಳಗಾಮ್. ನಮ್ಮ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯ ಜನರಿಗೆ ಅನುಕೂಲವಾಗುವಂತೆ ಉಚ್ಚನ್ಯಾಯಾಲಯಕ್ಕಾಗಿ ಬೆಂಗಳೂರಿಗೆ ಹಾಕಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಕೆ.ಪಟ್ಟಣಶೆಟ್ಟಿ: (ಬಾದಾಮಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮುಖ್ಯಮಂತ್ರಿಯವರು ತಂದಿರತಕ್ಕ ಸೂಚನೆಗೆ ತುಂಬು ಹೃದಯದಿಂದ ಬೆಂಬಲ ಸೂಚಿಸಿ, ಉಚ್ಚ ನ್ಯಾಯಾಲಯದ ಮತ್ತೊಂದು ಪೀಠ ಬಿಜಾಪುರ ನಗರಕ್ಕೆ ಆದರೆ ತುಂಬಾ ಒಳ್ಳೆಯದು. ಏಕೆಂದರೆ, ಇಲ್ಲಿಯವರೆಗೆ ರಾಯಚೂರು, ಗುಲ್ಬರ್ಗಾ, ಬೀದರ್ ಜಿಲ್ಲೆಯ ಶಾಸಕರು ಹೇಳಿದಂತೆ ಅವರಿಗೆ ಬೆಂಗಳೂರು ಬಹಳ ದೂರವಾಗುತ್ತದೆ. ಬಿಜಾಪುರ ನಗರದಲ್ಲಿ ಮಾಡಿದರೆ ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಉತ್ತರ ಕನ್ನಡ, ರಾಯಚೂರು, ಗುಲ್ಬರ್ಗಾ, ಬೀದರ್ ಹೀಗೆ ಎಲ್ಲಾ ಜಿಲ್ಲೆಯವರಿಗೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ ಅದು ಮಧ್ಯವರ್ತಿ ಸ್ಥಳ. ಕಾರಣ, ಮಾನ್ಯ ಮುಖ್ಯ ಮಂತ್ರಿಯವರು ಈ ಮಧ್ಯವರ್ತಿ ಆಗತಕ್ಕ ಮತ್ತು ಹಿಂದುಳಿದ ಜಿಲ್ಲೆಯಾದ ಬಿಜಾಪುರಕ್ಕೆ ಮನಸ್ಸು ಮಾಡಿ ಈ ಪೀಠವನ್ನು ಸ್ಥಾಪಿಸಿ ಅನುಕೂಲ ಮಾಡಿಕೊಟ್ಟರೆ ನಮ್ಮ ಬಿಜಾಪುರ ಜಿಲ್ಲೆ ಮತ್ತು ಸುತ್ತಮುತ್ತ ಜಿಲ್ಲೆಯವರು ನಿಮ್ಮನ್ನು ನೆನೆಸುತ್ತಾರೆ. ಉಳಿದ ಎಲ್ಲಾ ಜಿಲ್ಲೆಗಿಂತ ಬಿಜಾಪುರ ಮಧ್ಯವರ್ತಿ ಸ್ಥಳವಾದುದರಿಂದ ವಿಜಾಪುರಕ್ಕೆ ಉಚ್ಚ ನ್ಯಾಯಾಲಯದ ಪೀಠ ಕೊಟ್ಟರೆ ಒಳ್ಳೆಯದು, ಆದ್ದರಿಂದ ಎಲ್ಲರಿಗೂ ಬಹಳ ಸಂತೋಷವಾಗುತ್ತದೆ. ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಈ ಸೂಚನೆಗೆ ಬೆಂಬಲ ಕೊಟ್ಟು, ಬಿಜಾಪುರ ನಗರಕ್ಕೆ ತಾವು ಈ ನ್ಯಾಯ ಪೀಠವನ್ನು ಕೊಡುವಲ್ಲಿ ಮುತುವರ್ಜಿ ವಹಿಸುತ್ತೀರೆಂದು ಭಾವಿಸಿ ನನ್ನ ಮಾತು ಮುಗಿಸುತ್ತೇನೆ.

+ ಶ್ರೀ ವಿ.ಎಸ್.ಕೌಜಲಗಿ :(ಅರಭಾವಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯಮುಖ್ಯ ಮಂತ್ರಿಯವರು ತಂದಂಥ ನಿರ್ಣಯವನ್ನು ಬೆಂಬಲಿಸುತ್ತಾ, ಈ ಉಚ್ಚ ನ್ಯಾಯಾಲಯದ ಪೀಠವನ್ನು ಕರ್ನಾಟಕದ ರಾಣಿಯಾದಂಥ ಬೆಳಗಾಂನಲ್ಲಿ ಸ್ಥಾಪನೆ ಮಾಡುವುದು ಉತ್ತಮ. ಏಕೆಂದರೆ ಹವಾಮಾನದ ಅನುಕೂಲತೆ, ವಿಮಾನ ಸೌಕರ್ಯ ಮತ್ತು ಆ ಭಾಗದಲ್ಲಿ ಎಲ್ಲಾ ಜನರು ಕನ್ನಡದ ಬೆಳವಣಿಗೆ ಆಗಬೇಕೆಂದು ಕರ್ನಾಟಕ ಏಕೀಕರಣವಾದಂದಿನಿಂದ ಪ್ರಯತ್ನ ಮಾಡಿದ್ದಾರೆ. ಅಂಥ ಸ್ಥಳವಾದ ಬೆಳಗಾಂನಲ್ಲಿ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವುದಕ್ಕೆ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಬಂಗಾರಪ್ಪ: (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಜನ ಮಾನ್ಯ ಸದಸ್ಯರು ಈ ನಿರ್ಣಯದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸತಕ್ಕ ಸಂದರ್ಭದಲ್ಲಿ ಎರಡು ವಿಷಯಗಳನ್ನು ಪ್ರಾಮುಖ್ಯವಾಗಿ ಪ್ರಸ್ತಾವ ಮಾಡಿದ್ದಾರೆ. ನಾನು ಒಂದಕ್ಕೆ ಅಭಿನಂದಿಸುತ್ತೇನೆ. ಎಲ್ಲರೂ ಈ ನಿರ್ಣಯಕ್ಕೆ ಒಕ್ಕೊರಲಿನಿಂದ ಬೆಂಬಲ ಕೊಟ್ಟಿರತಕ್ಕ ವಿಷಯದಲ್ಲಿ ಮೆಚ್ಚಬೇಕು ಹಾಗೂ ಅಭಿನಂದಿಸಬೇಕು. ಇದಕ್ಕೆ ಕಾರಣವಿದೆ. ರಾಜ್ಯದ ಜನತೆಯ ಹಿತದೃಷ್ಟಿಯಿಂದ ವ್ಯವಹಾರಿಕವಾಗಿ ನೋಡಬೇಕು. ಜನರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಆದಷ್ಟು ಅನುಕೂಲತೆಗಳು ಕಡಿಮೆ ಖರ್ಚಿನಲ್ಲಿ ಜನರಿಗೆ ಸಿಗಬೇಕು. ಅವು ಸಿಗದಿದ್ದರೆ ನಾವು ನಮ್ಮ ಆಡಳಿತದಲ್ಲಿ ಲೋಪ ತಂದುಕೊಂಡ

ಹಾಗೆ ಆಗುತ್ತದೆ. ನಾವು ಪಕ್ಷಾತೀತವಾಗಿ , ಸದನ ಒಕ್ಕೂರಲಿನಿಂದ ಬೆಂಬಲ ಕೊಟ್ಟು ಇಂಥ ನಿರ್ಣಯ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ನಿರ್ಣಯಕ್ಕೆ ಸ್ವಾಗತ ಮಾಡತಕ್ಕುದ್ದು. ಮತ್ತು ಇನ್ನೊಂದು ಇಂಥ ಜಾಗದಲ್ಲೇ ಪೀಠ ಆಗಬೇಕೆಂದು ಪ್ರಸ್ತಾಪ ಮಾಡಿರತಕ್ಕುದು. ನಾನು ಆ ವಿಚಾರ ಹಾಕಿಲ್ಲ, ಅದರ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ಏನಾಗಿದೆ ಎಂದರೆ, ಕೆಲವರು ಹುಬ್ಬಳ್ಳಿ ಧಾರವಾಡ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ಬಳ್ಳಾರಿ ಈ ರೀತಿಯಾಗಿ ನಮ್ಮ ನಮ್ಮ ಕಡೆ ಮಾಡಬೇಕೆಂಬ ಅಭಿಪ್ರಾಯ ಬಂದಿದೆ. ಸರ್ಕಾರದ ಮೇಲೆ ಸಹಜವಾಗಿ ಎಷ್ಟೋ ವರ್ಷಗಳಿಂದ ಈ ಒಂದು ಒತ್ತಡ ಬಂದಿದೆ. ಈಗ ಜಾಗ ಹಿಡಿದುಕೊಂಡು ನಿರ್ಣಯ ಮಾಡುವುದಕ್ಕೆ ಹೋದರೆ ಇಲ್ಲಿ ಅಭಿಪ್ರಾಯ ವ್ಯತ್ಯಾಸವಾಗುತ್ತದೆ, ಅದಕ್ಕಾಗಿ ಅದನ್ನು ಬಿಡಬೇಕು ಎಂದು ಕೈಬಿಟ್ಟಿದ್ದೇವೆ. ತಾವು ಕೂಡ ಅದನ್ನು ಗಮನಿಸಿಯೇ ಹೇಳಿದ್ದೀರಿ. ಮೊದಲು ಉತ್ತರ ಕರ್ನಾಟಕ ಭಾಗದಲ್ಲಿ ಯಾವುದೋ ಜಾಗದಲ್ಲಿ ಮಾಡೋಣ. ಯಾವ ಜಾಗವೆಂದು ಆಮೇಲೆ ನೋಡೋಣ. ಈ ಬಗ್ಗೆ ಒಂದು ಕಡೆ ಸತ್ಯಾಗ್ರಹ ಮಾಡುತ್ತಿದ್ದಾರೆ. ನಾಳೆ ಅಲ್ಲಿ ಮಾಡಬಹುದು. ಈಗಲೇ ನಿರ್ಣಯ ಮಾಡಿದರೆ ಆ ನಿರ್ಣಯಕ್ಕೆ ವಿರುದ್ಧವಾಗಿ ಅಭಿಪ್ರಾಯ ಸತ್ಯಾಗ್ರಹ ಇಲ್ಲಿಯೇ ಬರಬಹುದು. ಅದನ್ನು ಮಾಡದೆ ಇರಲಿ ಎನ್ನತಕ್ಕ ದೃಷ್ಟಿಯಿಂದ ಸ್ವಲ್ಪ ಬುದ್ಧಿವಂತಿಕೆಯಿಂದ ಉತ್ತರ ಕರ್ನಾಟಕದಲ್ಲಿ ಒಂದು ಭಾಗದಲ್ಲಿ ಆಗಲಿ ಎಂಬ ಕಾರಣ ಬಿಟ್ಟರೆ ಬೇರೇನೂ ಉದ್ದೇಶ ಇಲ್ಲ. ಉತ್ತರ ಕರ್ನಾಟಕ ಭಾಗದಲ್ಲಿ ಮಾಡುವುದಕ್ಕೆ ನಾವು ರೆಡಿ ಇದ್ದೇವೆ, ಜಾಗ ಹೇಳಿ ಎಂದರೆ ಆಗ ನಾವು ಯಾವ ಜಾಗ ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸೋಣ. ಆಗ ವ್ಯವಸ್ಥೆ ಮಾಡೋಣ. ಇಲ್ಲಿ ಒಂದು ವಿಚಾರ ನಾವು ಮರೆಯಬಾರದು. ಈ ರೀತಿ ಉಚ್ಚ ನ್ಯಾಯಾಲಯದ ಪೀಠವನ್ನು ಮಾಡತಕ್ಕ ವಿಚಾರದಲ್ಲಿ ಯಾರ ಯಾರ ಅಧಿಕಾರ ಎಷ್ಟೆಷ್ಟು, ವ್ಯಾಪ್ತಿ ಎಷ್ಟು ಎನ್ನತಕ್ಕ ಒಂದು ವಿಚಾರದ ವಿಮರ್ಶೆ , ಆ ಮನೆಯಲ್ಲಿ ಎಷ್ಟು ಚರ್ಚೆಯಾಗಲಿಲ್ಲ. ಇಲ್ಲಿ ಚರ್ಚೆ ಆಗಿದ್ದರಿಂದ, ಕೆಲವು ಪ್ರಶ್ನೆಗಳು ಇಲ್ಲಿ ಬಂದಿದ್ದರಿಂದ ಇಲ್ಲಿ ಮಾಡುವುದು ಉಚಿತವೆಂದು ಅನ್ನಿಸುತ್ತದೆ. ಕರ್ನಾಟಕ ಹೈಕೋರ್ಟ್ ಏನಿದೆ ಅವರನ್ನು ನಾವು ಕನ್‌ಸಲ್ಟ್ ಮಾಡಬೇಕು ಎಂದು ಇದೆ, ಅಷ್ಟೆ. ಅನಂತರ ಅವರು ಒಪ್ಪಿಗೆ ಕೊಡಲೇಬೇಕು ಎನ್ನತಕ್ಕದ್ದು ಕಾನೂನು ಪ್ರಕಾರ ಇಲ್ಲ. ನಾವಾದಿರೂ ಕೂಡ ಕೇಂದ್ರ ಸರ್ಕಾರಕ್ಕೆ ಹೇಳಬೇಕು. ಹೈಕೋರ್ಟ್‌ನವರು, ನಾವು, ಅಂದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಇಲ್ಲಿ ತಿಳಿಸತಕ್ಕ ಸಂದರ್ಭದಲ್ಲಿ ಹಿಂದೆ ಚರಿತ್ರೆ ಏನಾಗಿದೆ ಎಂದರೆ, ಶ್ರೀಮಾನ್ ಡಿ.ಎಂ.ಚಂದ್ರಶೇಖರ್ ಅವರು ಮುಖ್ಯ ನ್ಯಾಯಾಧೀಶರಾಗಿದ್ದ ಕಾಲದಲ್ಲಿ ಫುಲ್ ಬೆಂಚ್ ಅವರು ತೀರ್ಮಾನ ಮಾಡಿದ್ದಾರೆ, ಎಲ್ಲಾ ನ್ಯಾಯಾಧೀಶರ ಸಭೆಯಲ್ಲಿ ಅವರು ತೀರ್ಮಾನ ಮಾಡಿದ್ದಾರೆ, ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಹೈಕೋರ್ಟ್ ಬೆಂಚ್ ತೆಗೆಯಬೇಕು ಎಂದು ತೀರ್ಮಾನ ಮಾಡಿದ್ದಾರೆ. ಮಾನ್ಯ ಡಿ.ಎಂ.ಚಂದ್ರಶೇಖರ್ ಅವರ ಕಾಲದಲ್ಲಿ ಮಾಡಿದ್ದಾರೆ. ಮಾನ್ಯ ವಿರೋಧಪಕ್ಷದ ನಾಯಕರ ಗಮನಕ್ಕೆ ಮತ್ತು ಸದನದ ಗಮನಕ್ಕೂ ಕೂಡ ಈ ವಿಚಾರವನ್ನು ತರುತ್ತಿದ್ದೇನೆಯೆಂದರೆ, ಅದು ಸ್ವಲ್ಪ ಅಡ್ಡದಾರಿ ಹಿಡಿದುಕೊಂಡಿದೆ. ಈಗಲೆ ಅಲ್ಲಿ ಮಾಡುವುದಕ್ಕೆ ಬರುವುದಿಲ್ಲ, ಅದಕ್ಕೆ ಸರಿಯಾಗಿ ಬೇಕಾದಂಥ ಕ್ವಾಲಿಫಿಕೇಷನ್ಸ್ ಇಲ್ಲ ಎಂಬ ವಿಚಾರ ಬಂದಿದೆ. ಯಾವ ಯಾವ ಕ್ವಾಲಿಫಿಕೇಷನ್ಸ್ ? ಬಿಲ್ಡಿಂಗ್ ಕಟ್ಟುವುದಕ್ಕೆ ನಮಗೆ ಜಾಗ ಸಿಗುತ್ತದೆ. ಬಿಲ್ಡಿಂಗ್ ಕಟ್ಟಲೇಬೇಕಾಗುತ್ತದೆ. ಯಾರು ಬಿಲ್ಡಿಂಗ್ ಕಟ್ಟಿಕೊಡುವವರು ? ಜಾಗ ಕೊಡುವವರು ಯಾರು ? ಸರ್ಕಾರದವರು . . . .

ಶ್ರೀ ಪಿ.ಸಿ.ಸಿದ್ದನಗೌಡರ್:- ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ನವರು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್.ಬಂಗಾರಪ್ಪ:- ಸುಮ್ಮನಿರಿ, ನಾನು ಹೇಳುತ್ತೇನೆ. ಯಾರೋ ದಾನ ಮಾಡಬಹುದು, ಸರ್ಕಾರ ಹಣ ಕೊಟ್ಟು ಪರ್ಚೇಸ್ ಮಾಡಬಹುದು, ಆ ವಿಚಾರ ಬೇರೆ. ಆದರೆ ಜಾಗ ಕೊಡುವವರು ಯಾರು? ಈ ಬಿಲ್ಡಿಂಗ್ ಕಟ್ಟುವವರು ಯಾರು ? ಸರ್ಕಾರ ಕಟ್ಟುತ್ತದೆ ಅಂದರೆ ಜನ ಕಟ್ಟಿಕೊಡುತ್ತಾರೆ ಎಂದು ಅದರ

ಅರ್ಥ? ಸರ್ಕಾರ ಯಾರ ದುಡ್ಡಿನಿಂದ ಇದೆಲ್ಲ ಕಟ್ಟುತ್ತದೆ ? ತೆರಿಗೆದಾರರ ಹಣದಿಂದ ಕಟ್ಟುತ್ತೇನೆ. ಅದರ ಅರ್ಥ ಯಾವ ಜನ ತೆರಿಗೆ ಹಣ ಕಟ್ಟುತ್ತಾರೆ ಅವರಿಗೆ ಆ ಸೌಲಭ್ಯ ಪಡೆಯುವ ಹಕ್ಕೂ ಇದೆ. ಇವತ್ತು ಬೇಡ ಎಂದು ಹೇಳುವ ಹಕ್ಕು ಮುಖ್ಯಮಂತ್ರಿಯಾಗಿ ನನಗೂ ಕೂಡ ಉಳಿದಿಲ್ಲ. ಈ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಮಾನ್ಯ ಸದಸ್ಯರು ತಾವಿರಬಹುದು, ನಾನಿರಬಹುದು ನಾವು ಏತಕ್ಕೆ ಇಷ್ಟು ವ್ಯಾಖ್ಯಾನ ಮಾಡುತ್ತೇವೆ ? ಜನರಿಗೆ ತೊಂದರೆಯಿದ್ದಾಗ ನಾವು ಸರಿಪಡಿಸತಕ್ಕ ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರುವಾಗ ನಾವು ನಮ್ಮ ಕರ್ತವ್ಯ ನಿರ್ವಹಣೆ ಮಾಡಬೇಕು. ಇಲ್ಲದಿದ್ದರೆ ಇಲ್ಲಿ ಕುಳಿತುಕೊಂಡು ಯಾವುಯಾವುದೋ ಒಂದು ವಿಚಾರ ಚಿಂತನೆ, ಏನೇನೋ ಪಾಯಿಂಟ್ಸ್ ಇದೆಲ್ಲಾ ನಾವು ನೋಡುತ್ತಾ ಹೋಗಿಬಿಟ್ಟರೆ, ಹಾಗಿದ್ದರೆ ಜನ ಸತ್ಯಾಗ್ರಹ ಮಾಡುವುದನ್ನು ಯೋಚನೆ ಮಾಡುವುದಕ್ಕೆ ಹೋಗುವುದಿಲ್ಲ. ಹುಬ್ಬಳ್ಳಿ ಧಾರವಾಡದಲ್ಲಿ ವಕೀಲ ಮಿತ್ರರು ಮತ್ತು ಸಾರ್ವಜನಿಕರು ಸತ್ಯಾಗ್ರಹ ಏನು ಮಾಡುತ್ತಿದ್ದಾರೆ. ಅದರ ಬಗ್ಗೆ ಏನೂ ಹೇಳುವುದಿಲ್ಲ. ಅವರ ಹಕ್ಕು ಸತ್ಯಾಗ್ರಹ ಮಾಡಿಕೊಳ್ಳುತ್ತಾರೆ. ಅದು ಸರಿಯೋ ತಪ್ಪೋ ಅದರ ಬಗ್ಗೆ ಅಲ್ಲ. ಸತ್ಯಾಗ್ರಹ ಮಾಡತಕ್ಕದ್ದು ಒಬ್ಬ ವ್ಯಕ್ತಿಯ ಹಕ್ಕು ಕಬ್ಬನ್ ಪಾರ್ಕ್‌ನಲ್ಲಿ ಕೂಡ ಸತ್ಯಾಗ್ರಹ ಮಾಡುವುದಕ್ಕೆ ಅಲ್ಲಿ ಟೆಂಟ್ ಹಾಕಿಕೊಂಡಿದ್ದಾರೆ. ನಾನು ಮೊನ್ನೆ ಉತ್ತರ ಕೊಡಬೇಕಾದರೆ ಮರೆತುಬಿಟ್ಟೆ. ನಾನು ಮನಸ್ಸು ತಡೆಯಲಾರದೆ ನಮ್ಮ ಅಧಿಕಾರಿಗಳನ್ನು ಮೂರು, ನಾಲ್ಕು ದಿವಸ ಮುಂಚೆ ಎಲ್ಲರ ಹತ್ತಿರ ಕಳುಹಿಸಿಕೊಟ್ಟೆ. ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರುತ್ತಿದ್ದೇನೆ. ಸತ್ಯಾಗ್ರಹ ಮಾಡತಕ್ಕದ್ದು ಅವರ ಹಕ್ಕು ಎಂದಮೇಲೆ ಆ ಹಕ್ಕನ್ನು ಮಾನ್ಯತೆ ಮಾಡಿದಮೇಲೆ ಆ ವಿಷಯ ಏನು ಹೇಳುವುದು ಬೇಡವೆ ? ನಾವು ವಿಧಾನಸೌಧದಲ್ಲಿ ಕುಳಿತುಕೊಂಡು ವಿಧಾನಸೌಧದ ಎದುರುಗಡೆ ಸತ್ಯಾಗ್ರಹ ಮಾಡುತ್ತಾ ಇದ್ದರೆ ಅವರನ್ನು ಕೇಳುವ ಸೌಜನ್ಯ ಕೂಡ ನಮಗೆ ಇಲ್ಲದಿದ್ದರೆ ಮೂಲಭೂತವಾಗಿ ನಾವು ತಪ್ಪು ಮಾಡುತ್ತೇವೆಂದು ನನ್ನ ಮನಸ್ಸಿಗೆ ಬಂದು ನಾನು ಅಧಿಕಾರಿಗಳನ್ನು ಕಳುಹಿಸಿಕೊಟ್ಟೆ. ಅಲ್ಲಿ ಯಾವಯಾವ 'ವಿಷಯ ಇದೆ ? ಕೆಲವರು ' ತಲೆ ಮೇಲೆ ಒಂದು ಸೂರು' ಎಂದು ಫೋಟೋ ಹಾಕಿಕೊಂಡಿದ್ದನ್ನು ನೋಡಿದೆ. ನಾನು ಶೇಟಲ್‌ಬ್ಯಾಡ್‌ಮಿಂಟನ್‌ಗೆ ಹೋಗುವಾಗ ನೋಡುತ್ತಾ ಇರುತ್ತೇನೆ. ಬೋರ್ಡ್ ಎಲ್ಲವೂ ಕಾಣಿಸುವುದಿಲ್ಲ, ಸರ್ಕಲ್ ಹತ್ತಿರ ಇರುವುದು ಕಾಣಿಸುತ್ತದೆ. ತಲೆ ಮೇಲೆ ಸೂರು ಎಂದರೆ ಏನು ? ನನಗೆ ಒಂದು ಮನೆ ಬೇಕು, ಜಾಗ ಕೊಡಿ ಎಂತಲೋ ಮನೆ ಕೊಡಿ ಎಂತಲೋ ಒಂದು ಬೇಡಿಕೆ ಇರುತ್ತದೆ. ಆ ಕಡೆ ಹೋದರೆ ನಮ್ಮ ಊರಿಗೆ ಕುಡಿಯುವ ನೀರು ಇಲ್ಲ ಎಂದು ಇರಬಹುದು. ಮತ್ತೊಂದು ಕಡೆ ಹೋದಾಗ ಕಾರ್ಮಿಕರ ವಿಚಾರ ಇರಬಹುದು. ಮತ್ತೊಂದು ಇರಬಹುದು. ಇದೆಲ್ಲವನ್ನೂ ಕೂಡ ನೋಡಿ ಅಲ್ಲಿ ಕೇಳುವುದೆಲ್ಲಾ ಅನ್ಯಾಯವಾಗಿ ಕೇಳುತ್ತಾರೆ ಎಂಬ ತೀರ್ಮಾನಕ್ಕೆ ನಾವು ಏತಕ್ಕೆ ಬರಬೇಕು ? ಕೇಳುವುದು ನ್ಯಾಯವಾಗಿದ್ದರೆ ಅದು ನ್ಯಾಯ-ಏಂದು ಹೇಳತಕ್ಕ ವಿಚಾರಕ್ಕೆ ಕೂಡ ನಾವು ಗಮನ ಕೊಡದೇ ಇದ್ದರೆ ನಾವು ಕರ್ತವ್ಯದಲ್ಲಿ ಚ್ಯುತಿ ತಂದು ಕೊಳ್ಳುವುದಿಲ್ಲವೇ ಎಂಬ ಮೂಲ ಪ್ರಶ್ನೆಯನ್ನು ಇಟ್ಟುಕೊಂಡು ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟೆ. ನಾನು ಸಚಿವರನ್ನು ಕಳುಹಿಸಿಕೊಟ್ಟಿಲ್ಲ. ಏಕೆಂದರೆ ಇಷ್ಟೇ ವಿಚಾರ. ಇವತ್ತು ನಮ್ಮ ಕಾಲದಲ್ಲಾಗಲೀ, ತಮ್ಮ ಕಾಲದಲ್ಲಾಗಲೀ ಬರೀ ಅದೇ ಕೆಲಸ ಆಗಿಬಿಡುತ್ತದೆ, ಕಬ್ಬನ್‌ಪಾರ್ಕ್‌ಗೆ ಹೋಗುವುದು ಬರುವುದು, ಅದು ಸರಿಯಲ್ಲ ಎಂದು. ಆದರೆ ವಿಚಾರ ತಿಳಿದುಕೊಂಡ ಮೇಲೆ ನಾವು ಕಾರ್ಯಕ್ರಮ ಹಾಕಬೇಕು. ನಾನು ಅಲ್ಲಿರತಕ್ಕ ಪೂರ್ತಿ ಮಾಹಿತಿಯನ್ನು ತರಿಸಿದ್ದೇನೆ. ತರಿಸಿ ಈಗಾಗಲೇ ಆದೇಶ ಕೊಟ್ಟಿದ್ದೇನೆ. ಅವರು ಕೇಳತಕ್ಕುದ್ದು 100ಕ್ಕೆ 90-95 ರಷ್ಟು ಒಳ್ಳೆಯ ಬೇಡಿಕೆಗಳಿವೆ. ನಾನು ನೋಡಿದೆ. ಆದರೆ ಅದನ್ನು ಏತಕ್ಕೆ ದೂರ ಇಡಬೇಕೋ ನನಗೆ ಅರ್ಥವಾಗುತ್ತಿಲ್ಲ. ನಾನು ಹೇಳಿಕಳುಹಿಸಿದ್ದೇನೆ, ಬೇಡ, ನೀವೆಲ್ಲಾ ಟೆಂಟ್ ತೆಗೆಯಿರಪ್ಪ, ನಾವು ಇದೆಲ್ಲಾ ವಿಚಾರ ಮಾಡುತ್ತೇವೆ, ಕಾರ್ಯಕ್ರಮ ಹಾಕುತ್ತೇವೆ ಎಂದು ಹೇಳಿ ಕಳುಹಿಸಿದ್ದೇನೆ. ಈಗಾಗಲೆ ಕೆಲವೆಲ್ಲಾ ಕಾರ್ಯಕ್ರಮ ಹಾಕಿದ್ದೇವೆ. ಅವರಿಗೆ ತಿಳಿಸಿ ಕಳುಹಿಸಿಕೊಡುತ್ತೇವೆ. ನಾನು ಬಿಡುವುದಿಲ್ಲ. ನಮ್ಮ ಗಮನಕ್ಕೆ ಬಂದಮೇಲೆ ಅದನ್ನು ಬಿಡಬಾರದು. ಅದನ್ನು ಪರ್‌ಸ್ಯೂ ಮಾಡಬೇಕು. ಆ ಕಾರ್ಯಕ್ರಮ ನಾವು ಹಾಕಿದ್ದೇವೆ. ತಂದಿದೆ ದಯವಿಟ್ಟು

ನಿಲ್ಲಿಸಿ ನಿಮ್ಮ ಸತ್ಯಾಗ್ರಹ ನಿಲ್ಲಿಸಿ ಎನ್ನುವ ವಿನಂತಿಯನ್ನು ನಾನು ಅವರಿಗೆ ಕಳುಹಿಸುತ್ತೇನೆ. ನಾಳೆ ಮತ್ತೊಬ್ಬರು ಬಂದರೂ ಕೂಡ ನಾವು ಕೇಳತಕ್ಕ ವ್ಯವಸ್ಥೆ ಮಾಡಿದ್ದೇವೆ. ಪಬ್ಲಿಕ್ ಗ್ರಿವೆನ್ಸಸ್ ಸೆಲ್ ಇದೆ. ಅವರು ಬಂದು ನಮಗೆ ಹೇಳುವುದು ಅಯಿತು. ಇವತ್ತು ಸತ್ಯಾಗ್ರಹ ಮಾಡುವ ಹಕ್ಕು ಇರುವಾಗ ನಾವು ಕೇಳುವುದು ಕರ್ತವ್ಯದ ಪ್ರಶ್ನೆ. ಇದು ಒಂದು ವಿಚಾರಧಾರೆ. ಇನ್ನು ಧಾರವಾಡ ಹುಬ್ಬಳ್ಳಿಯಲ್ಲಿ ಅವರು ಸತ್ಯಾಗ್ರಹ ಮಾಡಿದರೆ ಅದು ಅವರ ಹಕ್ಕಿನ ಪ್ರಶ್ನೆ ಆಗುತ್ತದೆ. ಅದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಆ ಸಂದರ್ಭದಲ್ಲಿ ಶ್ರೀಮಾನ್ ಡಿ.ಎಂ.ಚಂದ್ರಶೇಖರರ ಕಾಲದಲ್ಲಿ ಏನು ತೀರ್ಮಾನ ಮಾಡಿದ್ದಾರೆಂದರೆ, ಇಂತಹ ಜಾಗದಲ್ಲೇ ಉತ್ತರ ಕರ್ನಾಟಕದ ಭಾಗದಲ್ಲಿ ಒಂದು ಹೈಕೋರ್ಟ್ ಪೀಠ, ಬೆಂಚ್ ಆಫ್ ಹೈಕೋರ್ಟ್ ಆಗಬೇಕೆಂದು ತೀರ್ಮಾನ ಮಾಡಿದ್ದಾರೆ. ಅನೇಕ ಸಾರಿ ಅಂದರೆ ಸುಮಾರು 3-4 ಸಾರಿ ಬಂದಿರತಕ್ಕದ್ದು ನನಗೆ ನೆನಪು ಇದೆ. ನಾನು ಫೈಲ್ ತೆಗೆದುಕೊಂಡು ನೋಡಿದಾಗ ಇಲ್ಲಿ ನಾವು ಮಾಡುವುದು ಬೇಕಾಗಿಲ್ಲ ಎನ್ನುವುದು ಇದೆ. ಏಕೆಂದರೆ, ಅಲ್ಲಿ ಸರಿಯಾದ ಅಡ್ವೋಕೇಟ್ ಸಿಗುವುದಿಲ್ಲ, ಹುಬ್ಬಳ್ಳಿ ಧಾರವಾಡದಲ್ಲಿ ಸಿಗುವುದಿಲ್ಲ ಎಂದು ಅಂದರು. ನಾನು ಇಲ್ಲಿ ವಿರೋಧಪಕ್ಷದ ನಾಯಕರ ಗಮನಕ್ಕೆ ಬಹಳ ಪ್ರಮುಖವಾದ ವಿಚಾರವನ್ನು ತರುತ್ತಿದ್ದೇನೆ. ಈಗಿರತಕ್ಕ ಮುಖ್ಯ ನ್ಯಾಯಾಧೀಶರ ಜೊತೆಯಲ್ಲಿ ನೀವು ಮಾತನಾಡಿದಿರಿ ಎನ್ನುವುದನ್ನು ನಾನು ಕೇಳಿದೆ. ಈಗಿನ ಮುಖ್ಯನ್ಯಾಯಾಧೀಶರಾದ ಶ್ರೀಮಾನ್ ಭರೂಚ ಅವರ ಜೊತೆ ನಾನು ಮಾತನಾಡಿದ್ದೇನೆ. ಆಗ ನನ್ನ ಜೊತೆ ಲಾ ಮಿನಿಸ್ಟರ್ ಕೂಡಾ ಇದ್ದರು. ನಾವು ಮೂರು ಜನ ಕುಳಿತು, ಸುಮಾರು 10-15-20 ದಿವಸಗಳ ಹಿಂದೆ ನಮ್ಮ ಮನೆಯಲ್ಲೇ ಮಾತನಾಡಿದ್ದೇವೆ. ಪ್ರಾಮುಖ್ಯವಾಗಿ ಇದೇ ವಿಚಾರವನ್ನು ಮಾತನಾಡಿದ್ದೇವೆ. ಹೀಗೆ ಮಾತನಾಡತಕ್ಕ ಕಾಲದಲ್ಲಿ ಹಿಂದೆ ಡಿ.ಎಂ.ಚಂದ್ರಶೇಖರ್‌ರವರ ಕಾಲದ್ದು ಎಲ್ಲಾ ತೆಗೆದು ಓದಿ ಹೇಳುವುದು ಎಲ್ಲಾ ಮಾಡಿದ್ದೇವೆ. ಆದರೆ ವಿಚಾರ ಹೀಗಿದೆ ಎಂದು ಮಾತನಾಡಿದ್ದೇವೆ. ಪಾಪ ಇವರು ಬಂದಮೇಲೆ ಅದು ಆಗಿಲ್ಲ. ಇವರು ಬರುವುದಕ್ಕಿಂತ ಮುಂಚೆ ಆಗಿದೆ. ನಾನು ಅವರಿಗೆ ವಿನಂತಿ ಮಾಡಿದೆ. ತಾವು ದಯವಿಟ್ಟು ನಮಗೆ ತೀರ್ಮಾನ ಮಾಡಿಕೊಡಿ. ನಾವು ರೆಡಿ ಇದ್ದೇವೆ, ನೀವೂ ರೆಡಿ ಮಾಡಿ, ನಾವು ಇಬ್ಬರೂ ಸೇರಿ ರೆಕಮೆಂಡ್ ಮಾಡಿ ಕಳುಹಿಸಿಕೊಟ್ಟರೆ ಕೇಂದ್ರ ಸರ್ಕಾರದವರೂ ಒಪ್ಪುತ್ತಾರೆ. ಕೇಂದ್ರದ ಲಾ ಮಿನಿಸ್ಟರ್‌ರವರು ಒಪ್ಪುತ್ತಾರೆ ಎನ್ನುವ ಮಾತನ್ನು ನಾನು ಹೇಳಿದೆ. ನಾನು ಇನ್ನೊಂದು ಮಾತನ್ನು ಹೇಳಿದೆ. ಇದು ಜನರ ಹಕ್ಕು ಇವತ್ತು ನಾವು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುವ ಹಕ್ಕು ಹೇಗೆ ಬರುತ್ತದೆ? ಹಿಂದೆ ಬೇರೆ ಎಂದು ಹೇಳುವುದಕ್ಕೆ ಅಲ್ಲಿ ಅಡ್ವೋಕೇಟ್ ಸಿಕ್ಕಿಲ್ಲ, ಬುದ್ಧಿವಂತರು ಸಿಗಲ್ಲ ಎಂದರೆ ನಾನು ಹೇಳುತ್ತೇನೆ. ಶ್ರೀ ಮಳೀಮಠ್ ಎನ್ನುವವರು ನ್ಯಾಯಾಧೀಶರಾದರು, ಮುಖ್ಯನ್ಯಾಯಾಧೀಶರಾದರು. ಇಲ್ಲಿ ಮೆಣಸಿನಕಾಯಿ ಆಗುತ್ತಾರೆ, ದೇಸಾಯಿಯವರು ಆಗುತ್ತಾರೆ, ಉಳ್ಳಾಗಡ್ಡಿಮಠ್ ಆಗುತ್ತಾರೆ. ಉಳ್ಳಾಗಡ್ಡಿ, ಮೆಣಸಿನಕಾಯಿ, ಮಳೀಮಠ್, ಪಾಟೀಲರು ಆಗುತ್ತಾರೆ. ಅರ್ಧಕ್ಕರ್ಧಜನ ಹೈಕೋರ್ಟ್ ಜಡ್ಜ್ ಆಗಿರುವವರು ಇಲ್ಲಿ ಆಗಿರಬೇಕಾದರೆ, ಅಲ್ಲಿ ಹೈಕೋರ್ಟ್ ಬೆಂಚ್ ಮಾಡಿದರೆ, ಅಲ್ಲಿ ಅಡ್ವೋಕೇಟ್ ಆಗಿ ಪ್ರಾಕ್ಟೀಸ್ ಮಾಡುತ್ತಾರೆ, ಅಲ್ಲೇ ಕೇಸ್ ತೀರ್ಮಾನ ಮಾಡಿಕೊಡುತ್ತಾರೆ. ಜನಕ್ಕೆ ಇಲ್ಲಿ ಬಂದು ಜಡ್ಜ್ ಆಗುವ ಕೆಪಾಸಿಟಿ ಇದ್ದರೆ ಅಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಆಗುವುದಿಲ್ಲವೇ ಎಂದು ನಾನು ಮುಖ್ಯನ್ಯಾಯಾಧೀಶರಾದ ಭರೂಚ ಅವರ ಜೊತೆ ಮಾತನಾಡಿದ್ದೇನೆ.

Sri. M.L. USTAD, Those who are all from our districts.

Sri. S.BANGARAPPA :- Actually he appreciated on that point. I must thank the present Chief Justice of Karnataka High Court. ಇವತ್ತು ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ವಿರೋಧಪಕ್ಷದ ನಾಯಕರ ಗಮನಕ್ಕೆ ತರುವುದಾದರೆ, ಈ ವಿಚಾರವನ್ನು ಅವರ ಗಮನಕ್ಕೆ ತಂದು ಇದನ್ನು ಮಾಡಬೇಕು. ಇದು ಜನರ ಹಕ್ಕು. ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ, ಉತ್ತರ ಪ್ರದೇಶದಲ್ಲಿ ಮಾಡಿದ್ದಾರೆ, ಅಸ್ಸಾಮ್‌ನಲ್ಲಿ ಮಾಡಿದ್ದಾರೆ, ಬೇರೆ ಬೇರೆ ಕಡೆ ಮಾಡಿದ್ದಾರೆ.

ನೀವು ಮಾಡುವುದಿಲ್ಲ ಎಂದು ಹೇಳಿಬಿಟ್ಟರೆ, ನಾಳೆ ಕೇಂದ್ರ ಸರ್ಕಾರದವರು ಜನರ ಹಿತದೃಷ್ಟಿಯಿಂದ ಮಾಡಲೇಬೇಕೆಂದು ಹೇಳಿದರೆ ನಾವು ನೀವು ಏನೂ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಒಂದು ರೀತಿಯಿಂದ ನಾವೂ ನೀವೂ ಸೇರಿ ಮಾಡುವುದು ಒಳ್ಳೆಯದು ಎಂದು ಹೇಳಿದೆ. ಇದರ ವಿಚಾರ ಎಂದು ಕಾಣುತ್ತದೆ. ಹೈಕೋರ್ಟ್‌ನಲ್ಲಿ ಎಷ್ಟು ಕೇಸ್‌ಗಳು ಬಾಕಿ ಇವೆ ? ಹೈಕೋರ್ಟಿನಲ್ಲಾಗಲೀ, ಡಿಸ್ಟ್ರಿಕ್ಟ್ ಕೋರ್ಟ್‌ಇಲ್ಲಾಗಲೀ, ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಾಗಲಿ ಎಷ್ಟು ಕೇಸ್‌ಗಳು ಬಾಕಿ ಇವೆ ಎನ್ನುವುದಕ್ಕೆ ನಾವು ನಿಮಗೆ ಉತ್ತರ ಕೊಟ್ಟಿದ್ದೇವೆ. ಈ ಉತ್ತರ ಇಡಬೇಕೋ ಬಿಡಬೇಕೋ ಎನ್ನುವ ವಿಚಾರ ನನ್ನ ಗಮನಕ್ಕೆ ಬಂತು. ಇದನ್ನು ಸದನದ ಮುಂದೆ ಇಡಿ ಎಂದು ನಾನು ಹೇಳಿದೆ. After all, whatever reply that we have received from the High Court we will place it before the House. ಏನು ಕೊಟ್ಟಿದ್ದಾರೆಂದರೆ ಹೈಕೋರ್ಟ್ ವಿಚಾರ ನಿಮಗೆ ತಿಳಿಸಲಿಕ್ಕೆ ಬರುವುದಿಲ್ಲ ಎಂದು ತಿಳಿಸಿ, ಅಂದರೆ ನಮಗೆ ಕೇಳುವ ಹಕ್ಕು ಇಲ್ಲ ಎನ್ನುವ ಹಾಗೆ ಹೈಕೋರ್ಟಿನವರು ಬರೆದು ಕಳುಹಿಸಿಬಿಟ್ಟಿದ್ದಾರೆ. ನಾನು ಬೇರೆ ವ್ಯತ್ಯಾಸದಿಂದ, ಹೈಕೋರ್ಟ್ ಮೇಲೆ ಆಗಲೀ, ಮತ್ತೊಂದಾಗಲಿ ನಾನು ಮಾತನಾಡುತ್ತಿಲ್ಲ. ಆದರೆ ಹೈಕೋರ್ಟ್‌ನವರು ಕೂಡ ತಿಳಿದುಕೊಳ್ಳತಕ್ಕದ್ದು ಬಹಳ ಅವಶ್ಯಕತೆ ಏಕೆಂದರೆ It is a part and parcel of the whole democratic system here ಇವತ್ತು ಹೈಕೋರ್ಟ್ ಬಿಲ್ಡಿಂಗ್ ಕಟ್ಟುತ್ತಿರುವುದು ಜನರ ಹಣದಿಂದ. ನಮಗೆ ಅವರಿಗೆ ಸಂಬಳ ಕೊಡುವುದು ಜನರ ಹಣದಿಂದ. ಕೇಸುಗಳು ಮತ್ತೊಂದು, ಜಡ್ಜ್‌ಗಳ ನೇಮಕಾತಿಯಿಂದ ಹಿಡಿದು ಈ ರೆಕರಿಂಗ್ ಎಕ್ಸಪೆಂಡಿಚರ್‌ನಿಂದ ಹಿಡಿದು ಯಾರ ಹಣ ಸ್ವಾಮಿ ಇದೆಲ್ಲ? ಜನಸಾಮಾನ್ಯರ ಹಣ ಕೊಡುತ್ತೇವೆ ಎನ್ನತಕ್ಕಂಥ ಮಾನ್ಯ ಸದಸ್ಯರ ಜನತಾ ಪ್ರತಿನಿಧಿಗಳು. ಇವರಿಗೆ ಹಕ್ಕಿದೆ. ಇವತ್ತು ಈ ವಿವರಗಳನ್ನೆಲ್ಲ ನಾವು ಸದನಕ್ಕೆ ಕೊಟ್ಟರೆ, ಇದರ ಮುಖಾಂತರ ಪತ್ರಿಕೆ, ರೇಡಿಯೋ, ದೂರದರ್ಶನದ ಮುಖಾಂತರ ಅದು ಜನತೆಗೆ ತಲುಪುತ್ತದೆ. ಅದು ರೆಕಾರ್ಡಿಗೂ ಹೋದರೆ ಅದರ ಪ್ರತಿಯನ್ನು ಯಾರಾದರೂ ತರಿಸಿಕೊಳ್ಳಬಹುದು. ಅದು ಜನರಿಗೆ ಇರತಕ್ಕಂಥ ಹಕ್ಕು. ಕರ್ನಾಟಕದ ಜನತೆ ಯಾವ ತೆರಿಗೆದಾರರು ಇದ್ದಾರೆ, ಈ ತೆರಿಗೆದಾರರಿಗೆ ಈ ಮಾಹಿತಿ ಕೇಳತಕ್ಕಂಥ ಹಕ್ಕು ಇಲ್ಲ ನಿಮಗೆ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಹೈಕೋರ್ಟ್ ಬಗ್ಗೆ ಏನು ಹೇಳಬೇಕೆಂದು ನನಗೆ ಗೊತ್ತಿಲ್ಲ, ನಾನು ಇಲ್ಲಿಗೇ ನಿಲ್ಲಿಸುತ್ತೇನೆ. ನಾನು ಈಗಲೂ ಕೂಡ ಸದನದ ಮೂಲಕ ಹೈಕೋರ್ಟಿಗೆ ವಿನಂತಿ ಮಾಡುತ್ತೇನೆ. ಆ ರೀತಿ ಉತ್ತರ ಕಳಿಸಿಕೊಡತಕ್ಕದ್ದು ಒಳ್ಳೆಯದಲ್ಲ. ಅದು ಜನರ ಹಕ್ಕು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಹಕ್ಕು ಇದೆ ಎನ್ನತಕ್ಕಂಥ ಮೂಲ ವಿಷಯ, ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಂಡು ಮುಂದೆ ಹೋಗಬೇಕಾದ ವಿಚಾರ ಇದರಲ್ಲಿ ಅಡಗಿದೆ. ಆದ್ದರಿಂದ ಇನ್ನುಮೇಲೆ ಏನಾದರೂ ನಾವು ಕೇಳಿದರೆ ಅವರು ಒದಗಿಸುತ್ತಾರೆ ಎಂದು ತಿಳಿದುಕೊಳ್ಳೋಣ. ಉದಾಹರಣೆಗೆ ನಾಳೆ ಅವರೇನಾದರೂ ಕೇಳಿದರೆ ನಿಮಗೆ ಹಕ್ಕಿಲ್ಲವೆಂದು ನಾವು ಬರೆದು ಕಳಿಸಿಬಿಟ್ಟರೆ ? ಹೈಕೋರ್ಟ್ ಗತಿ ಏನಾಗುತ್ತದೆ ? ಅಥವಾ ನೀವು ಏನಾದರೂ ಕೇಳಿ ನಿಮಗೆ ಹಣ ಮಂಜೂರು ಮಾಡುವುದಕ್ಕೆ ಬರುವುದಿಲ್ಲ, ಏಕೆಂದರೆ ನೀವು ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಆದ್ದರಿಂದ ನೀವು ಅಲ್ಲೇ ಇರ್ರಪ್ಪ, ಮಧ್ಯೆ ಬೇಲಿ ಹಾಕಿಟ್ಟಿದ್ದೀವೆ,. ಕೆಂಪು ಬಿಲ್ಡಿಂಗ್ ಮತ್ತು ನಮ್ಮ ಬಿಲ್ಡಿಂಗ್ ಮಧ್ಯೆ ಆ ರೋಡ್ ಇದೆಯಲ್ಲ, ಅದರಾಚೆ ನಿಮ್ಮ ಗಡಿ ಮತ್ತು ನಮ್ಮದು ಈ ಕಡೆಗೆ. ನಾವು ಹೀಗೆ ಮಾಡುವುದಕ್ಕಾಗುತ್ತದೆಯಾ ? ಇದು ಒಳ್ಳೆಯದಲ್ಲ. ವಿವರಗಳನ್ನು ಅವರು ಕೊಡಬೇಕು. ಜ್ಯುಡಿಶಿಯರಿ, ಎಕ್ಸಿಕ್ಯೂಟಿವ್ ಮತ್ತು ನಮ್ಮ ಲೆಜಿಸ್ಲೇಚರ್ ಇವೆಲ್ಲ ಪ್ರಜಾಪ್ರಭುತ್ವದಲ್ಲಿ ಅವಿಭಾಜ್ಯ ಅಂಗಗಳು. ಈ ಮೂಲ ವಿಚಾರಕ್ಕೆ ಗೌರವ ಕೊಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ನಾನು ಈಗಲೂ ಕೂಡ ಅವರಿಗೆ ವಿನಂತಿ ಮಾಡುತ್ತೇನೆ. ಪತ್ರವನ್ನು ಕೂಡ ಬರೆಯುತ್ತೇನೆ. ಈ ರೀತಿ ಉತ್ತರ ಕಳಿಸಿಕೊಡುವುದು ಒಳ್ಳೆಯದಲ್ಲ, ಇದು ಪ್ರಜಾಪ್ರಭುತ್ವದ ಲಕ್ಷಣ ಅಲ್ಲ ಎಂದು ಕಳಿಸಿಕೊಡುತ್ತೇನೆ. ಇನ್ನು ಈ ಮಾತನ್ನು ನಾನು ಬೆಳೆಸುವುದಕ್ಕೆ ಹೋಗುವುದಿಲ್ಲ. ಸಾಂದರ್ಭಿಕವಾಗಿ ತಾವು ಹೇಳಿದಿರಿ ಮತ್ತು ನಾನು

ಸಾಂದರ್ಭಿಕವಾಗಿ ಪ್ರಸ್ತಾಪ ಮಾಡಿ ಅಲ್ಲಿಗೇ ನಿಲ್ಲಿಸುತ್ತೇನೆ. ಆಮೇಲೆ ನಿಮಗೆ ಅಭಿನಂದನೆ ಸಲ್ಲಿಸೋಣ ಎಂದು ಶ್ರೀ ದೇಶಪಾಂಡೆಯವರು ಹೇಳಿದರು. ಈಗ ಅಭಿನಂದನೆ ಸಲ್ಲಿಸಿಬಿಟ್ಟಿದ್ದೀರಿ. ಆ ಅಭಿನಂದನೆ ಹಾಗೆಯೇ ಇರಲಿ.

ಶ್ರೀ ಆರ್.ವಿ.ದೇಶಪಾಂಡೆ:- ಮಾಡಿದ ಮೇಲೆ ಡಬಲ್ ಅಭಿನಂದನೆ.

ಶ್ರೀ ಎಸ್.ಬಂಗಾರಪ್ಪ:- ಮಾಡಿದರೆ ಡಬಲ್ ಅಭಿನಂದನೆ ಮಾಡದೇ ಇದ್ದರೆ ನಿಮ್ಮ ಅಭಿನಂದನೆಯನ್ನು ಹಿಂದಕ್ಕೆ ತೆಗೆದುಕೊಳ್ಳಿ.

ಶ್ರೀ ಆರ್.ವಿ.ದೇಶಪಾಂಡೆ:- ರೆಸಲ್ಯೂಶನ್ ಮೂವ್ ಮಾಡಿದ್ದೀರಿ. ಒಳ್ಳೆಯ ಕೆಲಸ ಮಾಡಿದ್ದಕ್ಕೆ ಅಭಿನಂದನೆ ಸಲ್ಲಿಸಿದ್ದೇನೆ. ಅಲ್ಲಿ ಪೀಠ ಆದನಂತರ ಡಬಲ್ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದೆ.

ಶ್ರೀ ಎಸ್.ಬಂಗಾರಪ್ಪ:- ಬಹಳ ಸಂತೋಷ. ಈ ಸಂದರ್ಭದಲ್ಲಿ ನಾವು ಜಾಗ ಏತಕ್ಕೆ ಹೇಳಲಿಲ್ಲ ಎಂದರೆ ಅಭಿಪ್ರಾಯ ವಿಭಿನ್ನವಾಗಿ ಬರುವುದು ಬೇಡವೆಂದು ದೃಷ್ಟಿಯಿಂದ ಇಟ್ಟಿದ್ದೇವೆ. ಒಂದು ವಿಚಾರ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದೀರಿ. In one of the places in northern Karnataka area ಉತ್ತರ ಕರ್ನಾಟಕ ಭಾಗದಲ್ಲಿ ಒಂದು ಜಾಗ ಎಂದು ಹೇಳಿದ್ದೀರಿ. ನಾನು ಹೇಳುವುದು ಏನೆಂದರೆ, ನಾರ್ತ್ ಕರ್ನಾಟಕ ಏರಿಯಾ ಎಂದು ಕ್ಯಾಪಿಟಲ್ ಲೆಟರ್‌ನಿಂದ ಒಂದೊಂದು ಪದ ಪ್ರಾರಂಭವಾದರೂ ಕೂಡ, ಕರ್ನಾಟಕ ಏರಿಯಾ ಎಂದು ನಾವು ಕಾನೂನು ಪ್ರಕಾರ ಇಲ್ಲಿಯಾವುದನ್ನೂ ಇಟ್ಟಿಲ್ಲ. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಒಳ ಕರ್ನಾಟಕ, ಹೊರಕರ್ನಾಟಕ ಎಂದು ಇಷ್ಟು ಮಾತನಾಡಿದರೂ ಕಾನೂನು ಪ್ರಕಾರ ಒಂದೂ ಇಲ್ಲ. ಎಕ್ಸೆಪ್ಟ್ ನಾವೇನು ಇಲ್ಲಿ ಹೊಸ ಕಾನೂನನ್ನು ತರುತ್ತಿದ್ದೇವೆ ಅದು, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಏನಿದೆ ಅದು ಕೂಡ ಡೆವಲಪ್‌ಮೆಂಟ್ ಬಗ್ಗೆ ಇದೆಯೇ ವಿನಹ ಏರಿಯಾ ಬಗ್ಗೆ ಕೂಡ ನಾವು ಮಾಡುವುದಕ್ಕೆ ಹೋಗಿಲ್ಲ. ನಾವು ಎಲ್ಲಾ ವಿಚಾರಕ್ಕೂ ಏರಿಯಾವನ್ನು ಬೈಫರ್‌ಕೇಟ್ ಮಾಡುವುದಕ್ಕೆ ಹೋಗಿಲ್ಲ. ಆದ್ದರಿಂದ ಇಲ್ಲಿ ನಾರ್ತ್ ಕರ್ನಾಟಕ ಎಂದು ಜನರಲ್ ಆಗಿ ಇಟ್ಟಿದ್ದೇವೆ. ಅದರ ಅರ್ಥ ಉತ್ತರ ಕರ್ನಾಟಕ ಭಾಗದ ಯಾವುದಾದರೂ ಒಂದು ಜಾಗದಲ್ಲಿ ನಾವು ಮಾಡಿಕೊಳ್ಳಬಹುದು ಎನ್ನತಕ್ಕ ದೃಷ್ಟಿಯಿಂದ ಇಟ್ಟಿದ್ದೇವೆಯೇ ನ ವಿನಃ ಅದು ನಾರ್ತ್ ಕರ್ನಾಟಕ ಏರಿಯಾ ಎಂದಾಕ್ಷಣ ಬೇರೆ ಯಾವುದೇ ಅರ್ಥ ಇಲ್ಲ. ತಮ್ಮ ಅರ್ಥ ಇಟ್ಟೇ ಅದನ್ನು ನಾವು ಮಾಡಿದ್ದೇವೆ. ಆದ್ದರಿಂದ ಇದನ್ನು ಅಮೆಂಡ್‌ಮೆಂಟ್ ಮಾಡಬೇಕಾದ ಅವಶ್ಯಕತೆ ಬರಲಾರದು ಎಂದು ತಿಳಿದು ತಾವು ಇದನ್ನು ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಇನ್ನು ಉಳಿದಿರತಕ್ಕಂಥ ವಿಚಾರಕ್ಕೆ ತಾವೆಲ್ಲರೂ ಬೆಂಬಲ ಕೊಟ್ಟಿದ್ದೀರಿ. ಸರ್ವಾನುಮತದಿಂದ ಸದನ ಈ ಒಂದು ನಿರ್ಣಯವನ್ನು ಪಾಸ್ ಮಾಡಿಕೊಂಡರೆ ಕರ್ನಾಟಕ ರಾಜ್ಯದ ಜನತೆಯ ಹಿತ ಕಾಪಾಡತಕ್ಕಂಥ ವಿಚಾರದಲ್ಲಿ ಪಕ್ಷಾತೀತವಾಗಿ ಇಡೀ ಸದನ ಒಗ್ಗಟ್ಟಾಗಿ ಏಕವ್ಯಕ್ತಿಯಾಗಿ ನಾವು ಮುಂದಕ್ಕೆ ಹೋಗುತ್ತಿದ್ದೇವೆ ಎಂದಾಗುತ್ತದೆ. ಜನರ ನೋವನ್ನು ಅಳಿಸಿ ಹಾಕತಕ್ಕ ವಿಚಾರದಲ್ಲಿ, ಖರ್ಚು ವೆಚ್ಚ ಕಡಿಮೆ ಮಾಡತಕ್ಕ ವಿಚಾರದಲ್ಲಿ ನ್ಯಾಯವನ್ನು ಅದಷ್ಟು ಶೀಘ್ರವಾಗಿ ಅವರ ಮನೆ ಬಾಗಿಲಿಗೆ, ಅವರ ಮನೆಯ ಹತ್ತಿರ ಹತ್ತಿರ ತಲುಪಿಸತಕ್ಕ ಒಂದು ಪ್ರಾಮಾಣಿಕ ಪ್ರಯತ್ನದಲ್ಲಿ ನಮ್ಮೆಲ್ಲರ ಒಂದು ದಿಟ್ಟ ಹೆಜ್ಜೆ ನಾವು ನೀವು ಎಲ್ಲರೂ ಸೇರಿ ಭಾವಿಸಿದ್ದೇವೆ. ನಾನು ಈ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರ್ಕಾರದ ಕಾನೂನು ಸಚಿವರ ಜೊತೆಯಲ್ಲಿ ಮಾತನಾಡಿದ್ದೇನೆ. ಈ ನಿರ್ಣಯ ತೆಗೆದುಕೊಂಡು ಬರುತ್ತೇವೆಂದು ನಾನು ಹೇಳಿದ್ದೇನೆ. ಮೇಲಿನ ಸದನ ಈಗಾಗಲೇ ಒಪ್ಪಿಗೆ ಕೊಟ್ಟಿದ್ದು ಆಗಿದೆ. ನಾವು ಇಷ್ಟೆಲ್ಲ ಚರ್ಚೆ ಮಾಡಿದ್ದೇವೆ. ಮೇಲ್ಮನೆಯಲ್ಲಿ ಎಲ್ಲರೂ ಸೇರಿ, ನಾವು ಚರ್ಚೆ ಮಾಡುವುದಿಲ್ಲವೆಂದು ಹೇಳಿ ಅಷ್ಟು ಬೆಂಬಲದಿಂದ ಒಂದೇ ನಿಮಿಷದಲ್ಲಿ ಪಾಸ್ ಮಾಡಿಕೊಟ್ಟರು. ನಾವು ಇಲ್ಲಿ ಚರ್ಚೆ ಮಾಡಿದರೂ ಕೂಡ ಐದು ನಿಮಿಷಗಳಲ್ಲಿ ಪಾಸ್ ಮಾಡುತ್ತೇವೆ. ಎರಡೂ ಸದನಗಳೂ ಸೇರಿ ಒಗ್ಗಟ್ಟಿನಿಂದ ಇದನ್ನು ಪಾಸ್ ಮಾಡಿ ಕಳುಹಿಸಿ ಕೊಡುತ್ತೇವೆ. ಕೇಂದ್ರ ಸರ್ಕಾರದವರು ಇದಕ್ಕೆ ಒಪ್ಪಿಗೆ ಕೊಟ್ಟು, ಉತ್ತರ ಕರ್ನಾಟಕ ಒಂದು ಭಾಗದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವುದಕ್ಕೆ, ಅವರು ಒಪ್ಪಿಗೆ ಕೊಡುವುದಕ್ಕೆ ಬಹಳ ಶಕ್ತಿ ತುಂಬುತ್ತದೆ

ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು, ಬೇರೆ ಪಕ್ಷಗಳ ಮುಖಂಡರು ಮತ್ತು ಬೇರೆ ಮಿತ್ರರು ಹಾಗೂ ಮಾನ್ಯ ಸದಸ್ಯರು ಆ ಕಡೆ ಈ ಕಡೆ ಇರತಕ್ಕವರು ತಾವೆಲ್ಲ ಹೇಳಿದ್ದೀರಿ. ತಮ್ಮ ಅಭಿಪ್ರಾಯವನ್ನು ಈ ನಿರ್ಣಯದಲ್ಲಿ ನಾವು ನೀವು ಎಲ್ಲರು ಸೇರಿ ಇಟ್ಟಿದ್ದೇವೆ. ಇದನ್ನು ನಾವು ಪಾಸ್ ಮಾಡೋಣ. ಒಕ್ಕೂರಲಿನಿಂದ ತಾವು ಬೆಂಬಲ ಸೂಚಿಸಿದ್ದಕ್ಕಾಗಿ ಈ ಸಂದರ್ಭದಲ್ಲಿ ನಿಮ್ಮನ್ನು ಅಭಿನಂದಿಸಬೇಕು. ನಮ್ಮನ್ನೇ ನಾವು ಅಭಿನಂದಿಸಿಕೊಳ್ಳಬೇಕು ಸರ್ಕಾರದ ಪರವಾಗಿ ಎನ್ನತಕ್ಕ ಮಾತನ್ನು ನಾನು ವ್ಯತ್ಯಾಸ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಬೇರೆಯಲ್ಲ, ನಾವು ಬೇರೆಯಲ್ಲ, ಸರ್ಕಾರದ ಪರವಾಗಿ ಎಂದು ಸಾಂಪ್ರದಾಯಕವಾಗಿ ಹೇಳಬೇಕಾಗುತ್ತದೆ. ಬರೆಯ ಬೇಕಾಗುತ್ತದೆ. ಇದು ಸರ್ಕಾರದ ಮುಖಾಂತರ ಹೋಗಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಸದನದ ಎಲ್ಲ ಗೌರವಾನ್ವಿತ ಸದಸ್ಯರನ್ನು ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಇದಕ್ಕೆ ಬೆಂಬಲ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ನಾನು ಅಭಿನಂದಿಸುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ, ಉತ್ತರ ಕರ್ನಾಟಕ ಪ್ರದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಖಾಯಂ ಪೀಠದ ಸ್ಥಾಪನೆ ಮಾಡುವ ಅವಶ್ಯಕತೆ ಇದೆಯೆಂದು ಈ ಸದನವು ಪರಿಗಣಿಸಿದೆ ಮತ್ತು ಖಾಯಂ ನ್ಯಾಯ ಪೀಠದ ಸ್ಥಾಪನೆಯನ್ನು ಕೂಡಲೇ ಸ್ಥಾಪಿಸಬೇಕೆಂದು ಭಾರತ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಪ್ರಕಟಣೆ

ಉಪಾಧ್ಯಕ್ಷಿಣಿಯವರು :- ದಿನಾಂಕ 31-3-1992ರ ಮಂಗಳವಾರದಂದು ಸಭೆಯ ಕಾರ್ಯಕಲಾಪಗಳ ಸಲಹಾಸಮಿತಿಯು ಸಭೆ ಸೇರಿ ಚರ್ಚಿಸಿದ ನಂತರ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

I . ಶಾಸನ ರಚನೆ ಕಾರ್ಯಕಲಾಪಗಳು

1. ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಿಧೇಯಕ 1992 ಪರ್ಯಾಲೋಚನೆ ಹಾಗೂ ಅಂಗೀಕಾರ
2. ಭಂಗಿ ಕೆಲಸ ರದ್ದಿಯಾತಿಯ ಬಗ್ಗೆ ಶಾಸನಾತ್ಮಕ ನಿರ್ಣಯ.
3. ನಿಯಮ 68ರ ಮೇರೆಗೆ ನಾಗರಹೊಳೆಯಲ್ಲಿನ ಬೆಂಕಿ ಅನಾಹುತದ ಬಗ್ಗೆ ಚರ್ಚೆ.

II ಅರ್ಧಗಂಟೆ ಕಾಲ ಚರ್ಚೆ

MADAM DEPUTY SPEAKER :- And Half an hour discussion, given notice by Sriyuths D. B. Chandregowda, C.Byregowda, Basavaraja Rayareddy and others regarding starred question No. 1520 dated 31-3-1992. ನಾಳೆ ಫರ್ಸ್ಟ್ ಏಪ್ರಿಲ್. ಅಂದರೆ ಇಡೀ ಪ್ರಪಂಚದಾದ್ಯಂತ ಏಪ್ರಿಲ್ ಫೂಲ್ ಆಚರಿಸತಕ್ಕ ದಿನ.

ಮಂತ್ರಿಗಳ ಹೇಳಿಕೆ

ಶಿವಮೊಗ್ಗದಲ್ಲಿ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವುದರ ಬಗ್ಗೆ

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಸದಸ್ಯರಾದ ಈಶ್ವರಪ್ಪನವರು ಇವತ್ತು ಬೆಳಿಗ್ಗೆ ಅಥವಾ ನಿನ್ನೆ ಎಸ್.ಎಸ್.ಎಲ್.ಸಿ. ಪರೀಕ್ಷೆ.....